ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 41 RNI Number : KNKAN/25/A2770 14-02-2026 Saturday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :41 ರಾಯಚೂರು 14-02-2026 ಶನಿವಾರ ಪುಟ 04 ಬೆಲೆ ರೂ.2/- ಮೊ:8660146563

ಶೇ.75 ಅಣೆಕಟ್ಟು 25 ವರ್ಷ ಹಳೆಯದಾಗಿದ್ದು, ಸುರಕ್ಷತಾ ಮೌಲ್ಯಮಾಪನ ಕೈಗೊಳ್ಳುವ ತುರ್ತು ಅಗತ್ಯವಿದೆ

ಬೆಂಗಳೂರು,ಫೆ.13-

ಶೇ.75 ಅಣೆಕಟ್ಟು 25 ವರ್ಷ ಹಳೆಯದಾಗಿದ್ದು, ವ್ಯವಸ್ಥಿತ ಸುರಕ್ಷತಾ ಮೌಲ್ಯಮಾಪನ ಕೈಗೊಳ್ಳುವ ತುರ್ತು ಅಗತ್ಯ ಇದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿರುವ ಅಂತಾರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಸಮ್ಮೇಳನ 2026ನ್ನು ಉದ್ಘಾಟಿಸಿ ಮಾತನಾಡಿದ ಅವರು, ಶೇಕಡಾ 70ರಷ್ಟು ಅಣೆಕಟ್ಟುಗಳು 25 ವರ್ಷಗಳಿಗೂ ಮೇಲ್ಪಟ್ಟು ಹಳೆಯದಾಗಿದ್ದು, ಇವುಗಳ ವ್ಯವಸ್ಥಿತ ಸುರಕ್ಷತಾ ಮೌಲ್ಯಮಾಪನ, ಆಧುನೀಕರಣ ಮತ್ತು ಅಪಾಯ ಮುನ್ಸೂಚನೆಗಳನ್ನು ಒಳಗೊಂಡ ಕಾರ್ಯಾಚರಣೆಯನ್ನು ಕೈಗೊಳ್ಳುವ ತುರ್ತು ಇದೆ ಎಂದು ಸಾರುತ್ತಿವೆ ಎಂದರು.

ಪ್ರಸ್ತುತ ಹವಾಮಾನ ಬದಲಾವಣೆಯಿಂದ ಉಂಟಾಗುವ ನೀರಿನ ವೈಪರೀತ್ಯಗಳನ್ನು ನಾವು ಎದುರಿಸುತ್ತಿದ್ದೇವೆ. ಭೂಕಂಪನದ ಅಪಾಯಗಳು, ಜಲಾಶಯಗಳಲ್ಲಿ ಹೂಳು ಶೇಖರಣೆ, ಹಳೆಯ ಕಟ್ಟಡಗಳ ಮೇಲಿನ ಒತ್ತಡ - ಇವೆಲ್ಲಾ ಸಂಕೀರ್ಣ ಮತ್ತು ಪರಸ್ಪರ ಸಂಬಂಧಿತ ಅಪಾಯಗಳನ್ನು ಸೃಷ್ಟಿಸಿವೆ. ಅಣೆಕಟ್ಟು ಸುರಕ್ಷತೆ ಈಗ ಕೇವಲ ತಾಂತ್ರಿಕ ವಿಚಾರವಾಗಿ ನಂತರ ನೆನಪಿಸಿಕೊಳ್ಳುವ ವಿಷಯವಲ್ಲ, ಅದು ರಾಷ್ಟ್ರೀಯ ಭದ್ರತೆಯ ಅನಿವಾರ್ಯ ಅಂಶವಾಗಿದೆ ಎಂದು ಅಭಿಪ್ರಾಯಪಟ್ಟರು.



ಅಣೆಕಟ್ಟು ಸುರಕ್ಷತೆ ಎನ್ನುವುದು ಒಂದೇ ಇಲಾಖೆಯ ಜವಾಬ್ದಾರಿಯಲ್ಲ. ಇದು ಎಲ್ಲರೂ ಹಂಚಿಕೊಳ್ಳಬೇಕಾದ ರಾಷ್ಟ್ರೀಯ ಕರ್ತವ್ಯ. ಇದಕ್ಕೆ ಎಲ್ಲ ಸಂಸ್ಥೆಗಳ ಸಂಘಟಿತ ಕ್ರಮಗಳ ಅಗತ್ಯವಿದೆ. ಹವಾಮಾನ ಬದಲಾವಣೆ, ಎಂದೂ ಕಂಡರಿಯದ ಪ್ರವಾಹಗಳು, ದೀರ್ಘಕಾಲದ ಬರಗಾಲ, ಅನಿರೀಕ್ಷಿತ ನೀರಿನ ಹರಿವು - ಇವೆಲ್ಲಾ ಹಿಂದಿನ ಕಾಲದ ವಿನ್ಯಾಸದ ಅಂದಾಜುಗಳನ್ನೇ ತಿದ್ದಿ ಬರೆಯುವಂತೆ ಮಾಡಿವೆ. ಹೂಳು ಶೇಖರಣೆ, ಪರಿಸರದ ಅವನತಿ, ಜಲಾಶಯಗಳಿಂದ ಉಂಟಾಗುವ ಪರಿಸರ ಬದಲಾವಣೆಗಳು, ಇವು ದೀರ್ಘಾವಧಿಯ ನೀರು ಸಂಗ್ರಹ ಸಾಮರ್ಥ್ಯಕ್ಕೆ ಮತ್ತು ನದಿಗಳ ಆರೋಗ್ಯಕ್ಕೆ ಅಪಾಯವನ್ನುಂಟುಮಾಡುತ್ತಿವೆ. ಅಣೆಕಟ್ಟುಗಳು ಈಗ ಡಿಜಿಟಲ್ ವ್ಯವಸ್ಥೆಯಿಂದ ಕಾರ್ಯನಿರ್ವಹಿಸುತ್ತಿವೆ. ಹಾಗಾಗಿ ಸೈಬರ್ ಸುರಕ್ಷತೆ ಮತ್ತು ತಾಂತ್ರಿಕ ವಿಧ್ವಂಸಕತೆಯಿಂದ ರಕ್ಷಣೆ ಒದಗಿಸುವುದು ರಾಷ್ಟ್ರೀಯ ಮೂಲಸೌಕರ್ಯ ಭದ್ರತೆಯ ಪ್ರಮುಖ ಅಂಶಗಳಾಗಿ ಪರಿಗಣಿಸಬೇಕಾಗಿದೆ ಎಂದರು.

ನೀರಿನ ನಿರ್ಣಾಯಕ ಮೂಲ ಸೌಕರ್ಯಗಳು, ಭಯೋತ್ಪಾದನೆ ಮತ್ತು ಕಾರ್ಯತಂತ್ರದ ವಿಧ್ವಂಸಕತೆಗೆ ತುತ್ತಾಗುವ ಸಾಧ್ಯತೆ ಇದೆ. ಇದನ್ನು ತಡೆಯಲು ನಿರಂತರ ಎಚ್ಚರಿಕೆ ಮತ್ತು ಸಂಘಟಿತ ಗುಪ್ತಚರ ಕಾರ್ಯವಿಧಾನಗಳ ಅಗತ್ಯವಿದೆ. ಅಣೆಕಟ್ಟುಗಳು ಈಗ ಡಿಜಿಟಲ್ ವ್ಯವಸ್ಥೆಯಿಂದ ಕಾರ್ಯನಿರ್ವಹಿಸುತ್ತಿವೆ. ಹಾಗಾಗಿ ಸೈಬರ್ ಸುರಕ್ಷತೆ ಮತ್ತು ತಾಂತ್ರಿಕ ವಿಧ್ವಂಸಕತೆಯಿಂದ ರಕ್ಷಣೆ ಮಾಡುವುದು ರಾಷ್ಟ್ರೀಯ ಮೂಲಸೌಕರ್ಯ ಭದ್ರತೆಯ ಪ್ರಮು ಖ ಅಂಶಗಳಾಗಿ ಪರಿಗಣಿಸಬೇಕಾಗಿದೆ ಎಂದು ಹೇಳಿದರು.

ನೀರಿನ ಪ್ರಮುಖ ಮೂಲಸೌಕರ್ಯಗಳು ಭಯೋತ್ಪಾದನೆ ಮತ್ತು ಕುತಂತ್ರಗಳಿಗೆ ತುತ್ತಾಗುವ ಸಾಧ್ಯತೆ ಇದೆ. ಇದನ್ನು ತಡೆಯಲು ನಿರಂತರ ಎಚ್ಚರಿಕೆ ಮತ್ತು ಗುಪ್ತಚರ ವ್ಯವಸ್ಥೆಗಳ ಅಗತ್ಯವಿದೆ. ಜಲಾಶಯಗಳಿಂದ ಮೀಥೇನ್ ಅನಿಲ ಹೊರಬರುತ್ತಿರುವುದನ್ನು ಗಮನಿಸಿ, ಸುಸ್ಥಿರ ಮತ್ತು ಪರಿಸರ ಹಾನಿಯಾಗದಂತಹ ಜವಾಬ್ದಾರಿಯುತ ವ್ಯವಸ್ಥೆಯನ್ನು ಭವಿಷ್ಯದ ಅಣೆಕಟ್ಟು ಯೋಜನೆಗಳಲ್ಲಿ ಅಗತ್ಯವಾಗಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ನೀರು ರಾಜಕೀಯ ಗಡಿ ಗುರುತಿಸುವುದಿಲ್ಲ: ಜಲ ನಿರ್ವಹಣೆಯಲ್ಲಿ ಸಹಕಾರ ನೀಡಲು ಕರ್ನಾಟಕ ಬದ್ಧವಾಗಿದೆ. ನೀರು ರಾಜಕೀಯ ಗಡಿಗಳನ್ನು ಗುರುತಿಸುವುದಿಲ್ಲ ಅಂತೆಯೇ ಸುರಕ್ಷತಾ ಮಾನದಂಡಗಳೂ ಗಡಿಗಳನ್ನು ಗುರುತಿಸಬಾರದು. ಭಾರತದಲ್ಲಿಯೇ ಅತಿ ಹೆಚ್ಚು ಅಣೆಕಟ್ಟುಗಳನ್ನು ಹೊಂದಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದ್ದು, ಅಣೆಕಟ್ಟು ಸುರಕ್ಷತೆ ಕುರಿತು ನಡೆಯುವ ಚರ್ಚೆಗಳಲ್ಲಿ ಅನುಭವ ಮತ್ತು ಜವಾಬ್ದಾರಿ ಎರಡನ್ನೂ ಹೊಂದಿದ್ದೇವೆ ಎಂದು ಹೇಳಿದರು.

ಈ ಸಮ್ಮೇಳನವು ಜಾಗತಿಕ ಚೇತನವನ್ನು ಪ್ರತಿಬಿಂಬಿಸುತ್ತದೆ. ವಿವಿಧ ದೇಶಗಳ ತಜ್ಞರು, ನೀತಿ ನಿರೂಪಕರು ಹಾಗೂ ಅಭ್ಯಾಸಿಗಳು ಇಲ್ಲಿ ಒಟ್ಟುಗೂಡಿ ಅಣೆಕಟ್ಟು ಸುರಕ್ಷತೆ ಮತ್ತು ಸುಸ್ಥಿರ ಜಲ ಸಂಪನ್ಮೂಲ ನಿರ್ವಹಣೆಯ ಜವಾಬ್ದಾರಿ ಕುರಿತು ಚರ್ಚಿಸುತ್ತಿದ್ದೇವೆ. ಅಣೆಕಟ್ಟುಗಳು ಕೇವಲ ಕಾಂಕ್ರೀಟ್ ಮತ್ತು ಉಕ್ಕಿನ ರಚನೆಗಳಲ್ಲ. ಭಾರತದ ಮೊದಲ ದೂರದರ್ಶಿ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಅವರು ಅಣೆಕಟ್ಟುಗಳನ್ನು ಆಧುನಿಕ ಭಾರತದ ದೇವಾಲಯಗಳು ಎಂದು ಕರೆದಿದ್ದರು. ಇವು ನಮ್ಮ ಸಾಮೂಹಿಕ ಆಕಾಂಕ್ಷೆಗಳ ಸಂಕೇತಗಳು. ಕೃಷಿ ಸಮೃದ್ಧಿ ಮತ್ತು ಕೈಗಾರಿಕಾ ಪ್ರಗತಿಯ ಜೀವಾಳವೂ ಆಗಿವೆ ಎಂದರು.


ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ

ಸುಧಾರಣೆಗೆ ಕ್ರಮವಹಿಸಲು ಜಿಲ್ಲಾಧಿಕಾರಿ ಸೂಚನೆ

ರಾಯಚೂರು ಫೆ.13-

ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಸುಧಾರಿಸಿ, ರಾಜ್ಯದಲ್ಲಿ ರಾಯಚೂರು ಜಿಲ್ಲೆಯು ಉತ್ತಮ ಸ್ಥಾನ ಕಾಯ್ದುಕೊಳ್ಳುವ ಹಾಗೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಸಂಬಧಿಸಿದ ಅಧಿಕಾರಿಗಳು ತಮ್ಮ ಜವಾಬ್ದಾರಿ ಅರಿತು ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ನಿತೀಶ್ ಕೆ. ಅವರು ಹೇಳಿದರು.

ಫೆ.12ರ ಗುರುವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಸುಧಾರಣೆಗಾಗಿ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು



ಮಾತನಾಡಿದರು.

ಫಲಿತಾಂಶದ ಪ್ರಮಾಣ ಹೆಚ್ಚಿಸುವಲ್ಲಿ ಶಿಕ್ಷಕರ ಶ್ರಮ ಬಹಳ ಪ್ರಮುಖವಾಗಿರುತ್ತದೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಿ ವಿಶೇಷ ಗಮನಹರಿಸಿದಾಗ ಸಹಜವಾಗಿ ಉತ್ತಮ ಫಲಿತಾಂಶ ದೊರೆಯುತ್ತದೆ. ಮಕ್ಕಳ ಶೈಕ್ಷಣಿಕ, ಕೌಟುಂಬಿಕ ವಾತಾವರಣ ಸರಿಯಾಗಿಲ್ಲ ಎನ್ನುವಂತಹ ಬಾಲಿಶ ಕಾರಣಗಳನ್ನು ಹೇಳದೇ ಮಕ್ಕಳ ಕಲಿಕೆಗೆ ಪೂರಕ ವಾತಾವರಣ ನಿರ್ಮಿಸುವ ಹೊಣೆಗಾರಿಕೆ ಶಿಕ್ಷಕರ ಮೇಲಿದೆ ಎಂದು ಅವರು ತಿಳಿಸಿದರು.

ಪೂರ್ವಸಿದ್ಧತಾ ಪರೀಕ್ಷೆಗಳ ಫಲಿತಾಂಶದ ಆಧಾರದ ಮೇಲೆ, ಕಡಿಮೆಅಂಕ ಗಳಿಸಿದ ವಿದ್ಯಾರ್ಥಿಗಳ ಕಡೆಗೆ ಶಿಕ್ಷಕರು ವಿಶೇಷ ಗಮನ ಹರಿಸಬೇಕು. ಶೇ.40ಕ್ಕಿಂತ ಕಡಿಮೆ ಫಲಿತಾಂಶ ಬಂದಿರುವ ಶಾಲೆಗಳ ಮೇಲೆ ಹೆಚ್ಚಿನ ನಿಗಾ ವಹಿಸಿ, ಅಲ್ಲಿನ ಬೋಧನಾ ಕ್ರಮಗಳಲ್ಲಿ ಸುಧಾರಣೆ ತರಬೇಕೆಂದು ಸಂಬಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಈ ವೇಳೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ ಅವರು ಮಾತನಾಡಿ, ವಾರ್ಷಿಕ

3ನೇ ಪುಟಕ್ಕೆ

ರಾಯಚೂರಿನ ಘನತ್ಯಾಜ್ಯ ಸಂಪನ್ಮೂಲ ಪುನರ್ಬಳಕೆ

ನಿರ್ವಹಣಾ ಘಟಕದ ಸ್ಥಳಕ್ಕೆ ಪ್ರಾದೇಶಿಕ ಆಯುಕ್ತರು ಭೇಟಿ

ರಾಯಚೂರು ಫೆಬ್ರವರಿ 13

ರಾಯಚೂರು ಜಿಲ್ಲಾ ಪ್ರವಾಸದಲ್ಲಿದ್ದ ರಾಯಚೂರು ಮಹಾನಗರ ಪಾಲಿಕೆಯ ಆಡಳಿತಾಧಿಕಾರಿಗಳು ಆಗಿರುವ ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್ ಅವರು ಫೆ.11ರಂದು ಯಕ್ಲಾಸಾಪೂರ ಬಳಿಯಲ್ಲಿರುವ ರಾಯಚೂರಿನ ಘನತ್ಯಾಜ್ಯ ಸಂಪನ್ಮೂಲ ಪುನರ್ಬಳಕೆ ನಿರ್ವಹಣಾ ಘಟಕಕ್ಕೆ ಭೇಟಿ ನೀಡಿದರು.



ಜೆಸಿಬಿ ಮತ್ತು ಇನ್ನಿತರ ಯಂತ್ರಗಳ ಮೂಲಕ ಬಿರುಸಿನಿಂದ ನಡೆದ ಘನತ್ಯಾಜ್ಯ ಸಂಪನ್ಮೂಲ ಪುನರ್ಬಳಕೆ ನಿರ್ವಹಣಾ ಕಾರ್ಯದ ವೀಕ್ಷಣೆ ನಡೆಸಿದ ಆಯುಕ್ತರು, ಪಾಲಿಕೆಯು ಘಟಕದ ಆವರಣದಲ್ಲಿ ಕೈಗೊಂಡ ಬೇರೆ ಬೇರೆ ಕಾರ್ಯಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

ಕೆಲ ತಿಂಗಳುಗಳ ಹಿಂದಷ್ಟೇ ಉಪ ಲೋಕಾಯುಕ್ತರಾದ ಬಿ ವೀರಪ್ಪ ಅವರು ಇಲ್ಲಿಗೆ ಭೇಟಿ ನೀಡಿ ಘಟಕದ ನಿರ್ವಹಣಾ ಕಾರ್ಯದ ಬಗ್ಗೆ ಪರಿಶೀಲಿಸಿ, ಕಾರ್ಯಚುರುಕುಗೊಳಿಸಲು ಸೂಚನೆ ನೀಡಿದ್ದರು. ಅದರಂತೆ ಪಾಲಿಕೆಯು ಈ ಕಾರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿದೆ. ಸಾಕಷ್ಟು ಪ್ರಮಾಣದಲ್ಲಿ ಹಾಕಲಾಗಿದ್ದ ಘನತಾಜ್ಯ ಸಂಪನ್ಮೂಲ ಪುನರ್ಬಳಕೆ ನಿರ್ವಹಣಾ ಕಾರ್ಯ ನಡೆಸಿ ಅರ್ಧದಷ್ಟು ತಾಜ್ಯವನ್ನು ವಿಲೆ ಮಾಡಿ ಈಗ ಮೊದಲಿಗಿಂತ ನಿರ್ವಹಣಾ ಕಾರ್ಯ ಚುರುಕಾಗಿ ನಡೆದಿದೆ. ಇನ್ನು ಕೆಲವೇ ತಿಂಗಳಲ್ಲಿ ಇಲ್ಲಿನ ಎಲ್ಲ ಘನತಾಜ್ಯವನ್ನು ಪುನರ್ಬಳಕೆ ಪ್ರಕ್ರಿಯೆಗೊಳಪಡಿಸಿ ಖಾಲಿ ಮಾಡುವುದಾಗಿ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಆಯುಕ್ತರಿಗೆ ತಿಳಿಸಿದರು.

ಪಾಲಿಕೆಯ ವಾಹನಗಳ ವೀಕ್ಷಣೆ: ರಾಯಚೂರು ಮಹಾನಗರ ಪಾಲಿಕೆಯಿಂದ ನಗರದ ಸ್ವಚ್ಛತೆಗಾಗಿ ಖರೀದಿಸಿರುವ ಸ್ವೀಪಿಂಗ್ ಯಂತ್ರ, ಒಳಚರಂಡಿ ಶುಚಿಗೊಳಿಸುವ ಮೌಂಟೇಡ್ ರೋಬೋಟಿಕ್ ಯಂತ್ರದ ಕಾರ್ಯವನ್ನು ಆಯುಕ್ತರು ವೀಕ್ಷಣೆ ನಡೆಸಿದರು. ನಗರದ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಎರಡೂ ವಾಹನಗಳ ಕಾರ್ಯಗಳ ವೀಕ್ಷಣೆ ನಡೆಸಿದರು.

3ನೇ ಪುಟಕ್ಕೆ

ಕರ್ನಾಟಕ ರಾಜ್ಯ ಕೈಗಾರಿಕಾ, ಮೂಲಭೂತ ಸೌಕರ್ಯ ಅಭಿವೃದ್ಧಿ

ನಿಗಮದ ಅಧ್ಯಕ್ಷರಿಂದ ರಾಯಚೂರು ವಿಮಾನ ನಿಲ್ದಾಣ ಕಾಮಗಾರಿ ಪರಿಶೀಲನೆ

ರಾಯಚೂರು,ಫೆ.13-

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಎಸ್.ಜಿ.ನಂಜಯ್ಯನಮಠ ಅವರು ಫೆ.13ರಂದು ರಾಯಚೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಯರಮರಸ್ ಬಳಿಯ ವಿಮಾನ ನಿಲ್ದಾಣ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.



ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಒಟ್ಟಾರೆ 322 ಎಕರೆ ವಿಸ್ತೀರ್ಣ ಪ್ರದೇಶದಲ್ಲಿ ರಾಯಚೂರು ವಿಮಾನ ನಿಲ್ದಾಣ ಕಾಮಗಾರಿ ನಡೆಯುತ್ತಿದೆ. ಕಾಮಗಾರಿಯು ಈಗಾಗಲೇ ಶೇ.31ರಷ್ಟು ಪೂರ್ಣವಾಗಿದೆ. ಬರುವ ಎರಡೂವರೆ ತಿಂಗಳಲ್ಲಿ ರನ್ ವೇ ಕಾಮಗಾರಿಯು ಪೂರ್ಣವಾಗಲಿದೆ. ಈ ವರ್ಷದಲ್ಲಿ ಮಳೆ ನಿರಂತರವಾಗಿ ಸುರಿದ ಕಾರಣ ರನ್ ವೇ ಕಾಮಗಾರಿಯು ಮಂದಗತಿಯಲ್ಲಿ ಸಾಗಿತ್ತು ಎಂದು ತಿಳಿಸಿದರು.

ಒಟ್ಟಾರೆ ಮುಂದಿನ ಒಂದೂವರೆ ವರ್ಷದ ಕಾಲಾವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸುವ ಗುರಿ ಹೊಂದಿದ್ದೇವೆ. ಮುಂದಿನ 3 ತಿಂಗಳಲ್ಲಿ ಮತ್ತೆ ರಾಯಚೂರು ಪ್ರವಾಸ ಕೈಗೊಂಡು ಪುನಃ ಅಭಿವೃದ್ಧಿ ಕಾರ್ಯ ಪರಿಶೀಲಿಸುವೆ ಎಂದು ಅವರು ತಿಳಿಸಿದರು.

ಏಗನೂರು ಗ್ರಾಮದಲ್ಲಿ 30 ಮನೆಗಳು ಬೇರೆಡೆಗೆ ಸ್ಥಳಾಂತರ ಮಾಡಲು ಮೂರು ಎಕರೆ ಜಮೀನು ಹಾಗೂ ದಂಡ ಗ್ರಾಮದಲ್ಲಿನ 108 ಮನೆಗಳನ್ನು ಬೇರೆಡೆ ಸ್ಥಳಾಂತರ ಮಾಡಲು ಆರು ಎಕರೆ ಜಮೀನಿನಲ್ಲಿ ಲೇಔಟ್ ಕಾರ್ಯ ನಡೆಯುತ್ತಿದೆ ಎಂದು ಅವರು ತಿಳಿಸಿದರು.

ವಿಮಾನ ನಿಲ್ದಾಣ ಕಾಮಗಾರಿಯ ಸಂಬಧ ಬೇರೆಡೆಗೆ ಸ್ಥಳಾಂತರವಾಗುವ ಎರಡು ಗ್ರಾಮಗಳಲ್ಲಿನ ಗ್ರಾಮಸ್ಥರಿಗೆ ಅವರ ಮನೆಯ ಕಿಮ್ಮತ್ತಿನ ಪರಿಹಾರವನ್ನು ನೀಡಲಾಗಿದೆ ಎಂದು ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ರಾಜು ಬಂಡಿಕೇರಿ, ರಾಜು ಹರಿಳಯ್ಯಮಠ, ಲೋಕೋಪಯೋಗಿ ಇಲಾಖೆ ಅಭಿಯಂತರಾದ ಮಹೇಶ್ ಸೇರಿದಂತೆ ಇತರರು ಇದ್ದರು.

ದ್ವಿತೀಯ ಮೇಲ್ಮನವಿ ಆರ್‌ಟಿಐ ಅರ್ಜಿಗಳನ್ನು ಕಲ್ಬುರ್ಗಿ ಪೀಠಕ್ಕೆ ಸಲ್ಲಿಸಲು ಅವಕಾಶ

ರಾಯಚೂರು ಫೆ. 13

ಕಲ್ಯಾಣ ಕರ್ನಾಟಕ ಭಾಗದ ಏಳು ಜಿಲ್ಲೆಗಳ ವ್ಯಾಪ್ತಿ ಹೊಂದಿದ ಕರ್ನಾಟಕ ಮಾಹಿತಿ ಆಯೋಗದ ಕಲ್ಬುರ್ಗಿ ಪೀಠದಲ್ಲಿ ಮಾಹಿತಿ ಹಕ್ಕು ಕಾಯ್ದೆ 2005, ಕಲಂ 19(3) ರನ್ವಯ ಸಲ್ಲಿಕೆಯಾಗುವ ದ್ವಿತಿಯ ಮೇಲ್ಮನವಿ ಅರ್ಜಿಗಳನ್ನು ಇನ್ನುಮುಂದೆ ಕಲ್ಬುರ್ಗಿ ಪೀಠದಲ್ಲಿ ಸ್ವೀಕರಿಸಲಾಗುವುದು ಎಂದು ಆಯೋಗವು ಪ್ರಕಟಣೆಯಲ್ಲಿ ತಿಳಿಸಿದೆ.

ಈ ಮುಂಚೆ ಕಲಬುರಗಿ, ಬೀದರ್, ರಾಯಚೂರು, ಬಳ್ಳಾರಿ, ಕೊಪ್ಪಳ ವಿಜಯನಗರ ಯಾದಗಿರಿ ಜಿಲ್ಲೆಗಳು ವ್ಯಾಪ್ತಿಯಲ್ಲಿನ ದ್ವಿತೀಯ ಮೇಲ್ಮನವಿಗಳನ್ನು ಬೆಂಗಳೂರಿನ ಕರ್ನಾಟಕ ಮಾಹಿತಿ ಆಯೋಗದಲ್ಲಿ ಸಲ್ಲಿಸಬೇಕಿತ್ತು. ಆದರೆ, ಸಾರ್ವಜನಿಕರಿಗೆ ಅನುಕೂಲವಾಗುವ ದೃಷ್ಟಿಯಿಂದ ಹಾಗೂ ಪ್ರಕರಣಗಳ ಶೀಘ್ರ ವಿಲೇವಾರಿಗೆ ಅನುಕೂಲವಾಗಲು ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಅರ್ಜಿದಾರರು ತಮ್ಮ ಮಾಹಿತಿ ಹಕ್ಕು ಕಾಯ್ದೆ, 2005ರ ಕಲಂ 19(3) ದ್ವಿತೀಯ ಮೇಲ್ಮನವಿ ಅರ್ಜಿಗಳನ್ನು ಇನ್ನುಮುಂದೆ ಕರ್ನಾಟಕ ಮಾಹಿತಿ ಆಯೋಗ, ಕಲ್ಬುರ್ಗಿ ಪೀಠ, ಮಹಲ್-ಎ-ಶಾಹಿ ಅತಿಥಿ ಗೃಹ, ಹಳೆಯ ಪಿ.ಡಬ್ಲ್ಯೂ.ಡಿ.ಐ.ಬಿ ಆವರಣ, ರೈಲ್ವೆ ಸ್ಟೇಷನ್ ಎದುರುಗಡೆ ಕಲಬುರಗಿ ಇಲ್ಲಿ ಸಲ್ಲಿಸಬಹುದಾಗಿದೆ ಎಂದು ಪೀಠದ ಶಾಖಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೆ.16ರಂದು ರಾಯಚೂರು ಜಿಲ್ಲೆಯಲ್ಲಿ ಸಲೀಂ ಅಹ್ಮದ್ ಪ್ರವಾಸ

ರಾಯಚೂರು,ಫೆ.13

ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಮುಖ್ಯ ಸಚೇತಕರಾದ ಸಲೀಂ ಅಹ್ಮದ್ ಅವರು ಫೆ.16 ರಂದು ರಾಯಚೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಫೆ.15 ರಂದು ರಾತ್ರಿ 11.20ಕ್ಕೆ ರೈಲು ಮಾರ್ಗವಾಗಿ ಹೊರಟು ಫೆ.16ರ ಬೆಳಗ್ಗೆ 8.20ಕ್ಕೆ ರಾಯಚೂರು ನಗರಕ್ಕೆ ಆಗಮಿಸಿ ನಗರದ ಅತಿಥಿ ಗೃಹದಲ್ಲಿ ವಿಶ್ರಾಂತಿ ಪಡೆಯುವರು. ಬಳಿಕ ಬೆಳಿಗ್ಗೆ 11.30ಕ್ಕೆ ರಾಯಚೂರಿನ ಡಿಸಿಸಿ ಕಚೇರಿಯಲ್ಲಿ ಕಾರ್ಯಕರ್ತರ ಭೇಟಿ ಹಾಗೂ ಪತ್ರಿಕಾಗೋಷ್ಠಿ ನಡೆಸುವರು.

ರಾತ್ರಿ 8 ಗಂಟೆಗೆ ನಗರದ

3ನೇ ಪುಟಕ್ಕೆ

ಜಿಲ್ಲಾಡಳಿತದಿಂದ ಫೆ.15ರಂದು ಸಂತ ಶ್ರೀಸೇವಾಲಾಲ್ ಜಯಂತಿ

ರಾಯಚೂರು ಫೆ.13-

ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಸಂತ ಶ್ರೀಸೇವಾಲಾಲ್ ಜಯಂತಿ ಕಾರ್ಯಕ್ರಮವು ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಫೆಬ್ರವರಿ 15ರ ಬೆಳಿಗ್ಗೆ 11ಕ್ಕೆ ಹಮ್ಮಿಕೊಳ್ಳಲಾಗಿದೆ.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟಿಸುವರು. ಟನೆ ನೆರವೇರಿಸುವರು. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಘನ ಉಪಸ್ಥಿತಿ ವಹಿಸುವರು.

ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್. ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ

3ನೇ ಪುಟಕ್ಕೆ

ಸುರಕ್ಷಿತ ಅಂತರ್ಜಾಲ ದಿನ-2026ರ ಕಾರ್ಯಾಗಾರ

ಸುರಕ್ಷಿತ, ಜವಾಬ್ದಾರಿಯುತ ಅಂತರ್ಜಾಲ ಬಳಕೆ ಅತಿಮುಖ್ಯ: ಹಾಲಸಿದ್ದಪ್ಪ ಪೂಜಾರಿ ಸಲಹೆ

ರಾಯಚೂರು,ಫೆ. 12- ಪ್ರಸ್ತುತ ಸನ್ನಿವೇಶದಲ್ಲಿ ಬಹುತೇಕ ಎಲ್ಲ ವಲಯಗಳಲ್ಲಿ ಅಂತರ್ಜಾಲ ಬಳಕೆಯಾಗುತ್ತಿದೆ. ಸುರಕ್ಷಿತ ಮತ್ತು ಜವಾಬ್ದಾರಿಯುತ ಬಳಕೆಯ ಬಗ್ಗೆ ಪ್ರತಿಯೊಬ್ಬರು ಎಚ್ಚರ ವಹಿಸಬೇಕು ಎಂದು ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಗಳಾದ ಹಾಲಸಿದ್ದಪ್ಪ ಪೂಜಾರಿ ಅವರು ಹೇಳಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಮಾಹಿತಿ ತಂತ್ರಜ್ಞಾನ (ಎನ್‌ಐಸಿ) ರಾಯಚೂರು ಇವರ ಸಹಯೋಗದಲ್ಲಿ ಇತ್ತೀಚೆಗೆ ಹಮ್ಮಿಕೊಳ್ಳಲಾಗಿದ್ದ ಸುರಕ್ಷಿತ ಅಂತರ್ಜಾಲ ದಿನ-2026ರ ಕಾರ್ಯಾಗಾರದಲ್ಲಿ ಸಸಿಗೆ ನೀರುಣಿಸಿ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆಯ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ಸೈಬರ್ ಸುರಕ್ಷತೆಯನ್ನು ತಮ್ಮ ದಿನನಿತ್ಯದ ಕಾರ್ಯಗಳಲ್ಲಿ ಅಳವಡಿಸಿಕೊಳ್ಳಬೇಕು. ಬ್ಯಾಂಕಿಗ್, ಇ-ಆಫೀಸ್, ಆನ್‌ಲೈನ್ ತರಗತಿ, ಮೀಟಿಂಗ್‌ಗಳು ಹೀಗೆ ಎಲ್ಲೆಡೆ ಅಂತರ್ಜಾಲ ಬಳಕೆ ವ್ಯಾಪಕವಾಗಿದೆ. ಅದೇ ರೀತಿ ಸೈಬರ್ ಅಪರಾಧಗಳೂ ಹೆಚ್ಚುತ್ತಿವೆ ಎಂದರು.

ಅಕ್ಷರಸ್ಥರೇ ಹೆಚ್ಚಿನ ಸಂಖ್ಯೆಯಲ್ಲಿ ಸೈಬರ್ ಅಪರಾಧಗಳಲ್ಲಿ



ಭಾಗಿಯಾಗುತ್ತಿದ್ದಾರೆ. ಸೈಬರ್ ವಂಚನೆಯ ಮೂಲಕ ಕೋಟಿಗಟ್ಟಲೆ ಹಣವನ್ನು ಖಾತೆಗಳಿಂದ ಕಬಳಿಸಲಾಗುತ್ತಿದೆ. ಆದ್ದರಿಂದ ಪ್ರತಿಯೊಬ್ಬರೂ ಸುರಕ್ಷಿತ ಅಂತರ್ಜಾಲ ಬಳಕೆ ಬಗ್ಗೆ ತಿಳಿದುಕೊಳ್ಳಬೇಕು. ವಂಚನೆಗೆ ಒಳಗಾದಲ್ಲಿ ತಕ್ಷಣ ಹತ್ತಿರದ ಪೊಲೀಸ್ ಠಾಣೆಯಲ್ಲಿ ದೂರು ನೀಡಬೇಕು ಎಂದರು.

ಈ ವೇಳೆ ವೈರ್‌ಲೆಸ್ ಪಿಎಸ್‌ಐ ಮಹೇಶ ಅವರು ಮಾತನಾಡಿ, ಕಚೇರಿಗಳಲ್ಲಿ ಲಾಗಿನ್ ಮಾಹಿತಿಗಳನ್ನು ಸುರಕ್ಷಿತವಾಗಿ ಇಟ್ಟುಕೊಳ್ಳಬೇಕು. ಬಳಕೆ ನಂತರ ಕಡ್ಡಾಯವಾಗಿ ಲಾಗ್‌ಔಟ್ ಮಾಡಬೇಕು. ಮಕ್ಕಳು, ಹದಿಹರೆಯದವರು ಕಲಿಕೆ, ಮನರಂಜನೆಗಾಗಿ ಇಂದು ಹೆಚ್ಚಾಗಿ ಅಂತರ್ಜಾಲ ಬಳಸುತ್ತಿದ್ದಾರೆ. ವಂಚಕರು ಮೊಬೈಲ್‌ಗೆ ಕರೆ ಮಾಡಿ ನೀವು ಕಳುಹಿಸಿದ ಕೋರಿಯರ್ ಪಾರ್ಸಲ್‌ಗಳಲ್ಲಿ ಮಾದಕ ವಸ್ತು, ನಕಲಿ ಪಾಸ್‌ಪೋರ್ಟ್ ಇದೆ. ನಿಮ್ಮ ವಿರುದ್ಧ ಬೇರೆ ರಾಜ್ಯಗಳಲ್ಲಿ ದೂರು ದಾಖಲಾಗಿದೆ ಎಂದು ಬೆದರಿಸಿ ಡಿಜಿಟಲ್ ಅರೆಸ್ಟ್ ಮಾಡಿ ತಮ್ಮ ಖಾತೆಗೆ ಹಣ ಹಾಕಿಸಿಕೊಳ್ಳುವ ವಂಚಕರಿದ್ದಾರೆ ಎಂದು ಎಚ್ಚರಿಸಿದರು.

ಇ-ಕೆವೈಸಿ ಅಪ್‌ಡೇಟ್ ಹೆಸರಿನಲ್ಲಿ ನೈಜ ಬ್ಯಾಂಕಿಗ್ ಅಪ್ಲಿಕೇಶನ್‌ಗಳಂತೆ ಕಾಣುವ ಎಪಿಕೆ ಫೈಲ್ ಕಳುಹಿಸಿ ವಂಚಿಸುವುದು, ನಕಲಿ ಹೂಡಿಕೆ ಅಪ್ಲಿಕೇಷನ್ ಬಳಸಿ ಕಡಿಮೆ ಅವಧಿಯಲ್ಲಿ ಹೆಚ್ಚಿನ ಆದಾಯ ನೀಡುವ ಭರವಸೆ ನೀಡಿ ವಂಚಿಸಲಾಗುತ್ತಿದೆ ಎಂದರು.

ಈ ವೇಳೆ ಎನ್‌ಐಸಿನ ಹಿರಿಯ ನಿರ್ದೇಶಕರು ಹಾಗೂ ಜಿಲ್ಲಾ ಸಂಯೋಜಕರಾದ ಟಿ.ಕೆ.ರಾಘವೇಂದ್ರ ಅವರು ಮಾತನಾಡಿ, ಚತುರ ತಂತ್ರಜ್ಞಾನ, ಸುರಕ್ಷಿತ ಆಯ್ಕೆಗಳು, ಎಐನ ಸುರಕ್ಷಿತ ಮತ್ತು

3ನೇ ಪುಟಕ್ಕೆ

ವಸತಿ ಬೇಡಿಕೆ ಇದ್ದಲ್ಲಿ ಪ್ರಸ್ತಾವನೆ ಸಲ್ಲಿಸಿ

ಬಳ್ಳಾರಿ, ಫೆ.13-

ಜಿಲ್ಲೆಯಲ್ಲಿ ವಸತಿ ಅವಶ್ಯಕತೆ ಇರುವ ಪ್ರದೇಶಗಳಿಂದ ಸಮಗ್ರ ಪ್ರಸ್ತಾವನೆಗಳನ್ನು ಸಲ್ಲಿಸಬೇಕು ಎಂದು ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಝಮೀರ್ ಅಹ್ಮದ್ ಖಾನ್ ಹೇಳಿದರು.

ನಗರದ ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಗುರುವಾರ ನಡೆದ ಮೊದಲ ಜಿಲ್ಲಾ ಯೋಜನಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಸುಮಾರು 2 ಸಾವಿರ ಮನೆಗಳ ಬೇಡಿಕೆ ಇರುವುದಾಗಿ ಯೋಜನಾ ಸಮಿತಿಯ ವರದಿಯಲ್ಲಿ ಉಲ್ಲೇಖವಾಗಿದೆ. ಈ ಕುರಿತು ಪೂರಕ ಸಮೀಕ್ಷೆ ನಡೆಸಿ, ವಸತಿ ಬೇಡಿಕೆಗೆ ಅನುಗುಣವಾಗಿ ಪ್ರಸ್ತಾವನೆ ಸಿದ್ಧಪಡಿಸಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ವಿವಿಧ ಯೋಜನೆಗಳಡಿ ಅನುದಾನ ಲಭ್ಯವಿರುವುದರಿಂದ ಅಗತ್ಯ ವರದಿ ಸಲ್ಲಿಸಿದಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ವಸತಿ, ಶಿಕ್ಷಣ, ಆರೋಗ್ಯ ಸೇರಿದಂತೆ ವಿವಿಧ ಕ್ಷೇತ್ರಗಳ ಅಭಿವೃದ್ಧಿಗೆ 5,500 ಕೋಟಿ ರೂ. ಅಂದಾಜು ಮಾಡಲಾಗಿದೆ. ಹೆಚ್ಚುವರಿ ಅಭಿವೃದ್ಧಿ ಕಾರ್ಯಗಳಿಗೆ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದಲ್ಲಿ ಯೋಜನಾ ವರದಿಯಲ್ಲಿ ಸೇರಿಸಲಾಗುವುದು ಎಂದು ತಿಳಿಸಿದರು.



ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರಿಸ್ ಸುಮೇರ್ ಮಾತನಾಡಿ, ಜಿಲ್ಲಾ ಯೋಜನಾ ಸಮಿತಿ ಸಭೆ ಗ್ರಾಮೀಣ ಹಾಗೂ ನಗರ ಪ್ರದೇಶಗಳ ಅಭಿವೃದ್ಧಿ ಯೋಜನೆಗಳನ್ನು ಕ್ರೋಢೀಕರಿಸಿ ಅನುಮೋದಿಸುವ ಮತ್ತು ಮೇಲ್ವಿಚಾರಣೆ ನಡೆಸುವ ಮಹತ್ವದ ವೇದಿಕೆಯಾಗಿದೆ. ಜಿಲ್ಲೆಯ ಮೊದಲ ಸಭೆಯಾದ ಹಿನ್ನೆಲೆಯಲ್ಲಿ ಸದಸ್ಯರು ತಮ್ಮ ಪ್ರಸ್ತಾವನೆಗಳನ್ನು ಸಲ್ಲಿಸಲು ಅವಕಾಶವಿದೆ ಎಂದು ಹೇಳಿದರು.

ಬಳ್ಳಾರಿ ಗ್ರಾಮೀಣ ಶಾಸಕ ಬಿ. ನಾಗೇಂದ್ರ ಅವರು, ನಗರದ ಏಕಶಿಲಾ ಬೆಟ್ಟ ಕೋಟೆ ಅಭಿವೃದ್ಧಿ ಹಾಗೂ ಎರಡು ಪ್ರಮುಖ ದ್ವಾರಗಳನ್ನು ಪ್ರಾಚೀನ ಶೈಲಿಯಲ್ಲಿ 30 ಅಡಿ ಎತ್ತರದಲ್ಲಿ ನಿರ್ಮಿಸಲು 5-6 ಕೋಟಿ ರೂ. ಅನುದಾನ ನೀಡುವಂತೆ ಪ್ರಸ್ತಾಪಿಸಿದರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಹಳೆಯ ಜಿಲ್ಲಾ ನ್ಯಾಯಾಲಯ ಕಟ್ಟಡವನ್ನು ಕಾನೂನು ಕಾಲೇಜಾಗಿ ಪರಿವರ್ತಿಸಲು ಅನುದಾನ ಒದಗಿಸುವಂತೆ ಮನವಿ ಮಾಡಿದರು.

ಕುರೇಕುಪ್ಪ ಸದಸ್ಯರು ಪುರಸಭೆ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಹಾಗೂ ಹೊಸ ಶಾಲೆಗೆ ಸಂಪರ್ಕ ರಸ್ತೆಯ ಸಮಸ್ಯೆ ಕುರಿತು ಗಮನಸೆಳೆದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಪಂ ಸಿಇಒ, ಜಿಲ್ಲಾಧಿಕಾರಿಯವರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಮಹಾನಗರ ಪಾಲಿಕೆಯ ಮೇಯರ್ ಪಿ. ಗಾದೆಪ್ಪ, ಜಿಪಂ ಆಡಳಿತಾಧಿಕಾರಿ ಡಾ. ತ್ರಿಲೋಕ ಚಂದ್ರ ಕೆ.ವಿ., ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಜಿಲ್ಲಾ ಯೋಜನಾ ಸಮಿತಿಯ ಸದಸ್ಯರು ಮತ್ತು ಇತರರು ಉಪಸ್ಥಿತರಿದ್ದರು.



ಕಾರ್ಮಿಕ ಸಂಘಟನೆಗಳ ಮುಷ್ಕರಕ್ಕೆ ಬೆಂಬಲಿಸಿ ಅಂಗನವಾಡಿ ನೌಕರರಿಂದ ಪ್ರತಿಭಟನೆ

ಆಳಂದ,ಫೆ.13-

ದೇಶವ್ಯಾಪಿ ನಡೆದ ಕೇಂದ್ರ ಕಾರ್ಮಿಕ ಸಂಘಟನೆಗಳ ಕರೆಯ ಮೇರೆಗೆ ಆಳಂದ ತಾಲೂಕು ಅಂಗನವಾಡಿ ನೌಕರರ ಮುಷ್ಕರಕ್ಕೆ ಬೆಂಬಲಿಸಿ ತಾಲೂಕು ನೌಕರರರ ಸಂಘದ ಆಶ್ರಯದಲ್ಲಿ ಪಟ್ಟಣದ ಬಸ್ ನಿಲ್ದಾಣದಿಂದ 5 ಕಿ.ಮೀ ದೂರದ ಆಡಳಿತಸೌಧ ವರೆಗೆ ಪ್ರತಿಭಟನಾ ರ್‍ಯಾಲಿ ನಡೆಸಿ ತಹಶೀಲ್ದಾರ್ ಅಣ್ಣಾರಾವ್ ಪಾಟೀಲ ಮೂಲಕ ಸರ್ಕಾರಕ್ಕೆ ಬೇಡಿಕೆಯ ಮನವಿ ಸಲ್ಲಿಸಿದರು.

ಶಿಕ್ಷಣ ಇಲಾಖೆ ಎಲ್‌ಕೆಜಿ, ಯುಕೆಜಿ ನಡೆಸುವುದನ್ನು ನಿಲ್ಲಿಸಿ ಅಂಗನವಾಡಿ ಕೇಂದ್ರಗಳಲ್ಲಿ ನಡೆಸಿ ಅಗತ್ಯವಿರುವ ಬಜೆಟ್ ನೀಡಬೇಕು. 4 ಕಾರ್ಮಿಕ ಸಂಹಿತೆಗಳು ರದ್ದುಗೊಳಿಸಬೇಕು. ಶ್ರಮಶಕ್ತಿ ನೀತಿ 2025ರ ಬೇಡವೇ ಬೇಡಾ, ಮುಟ್ಟಿನ ರಜೆ ನೀಡಬೇಕು. 56 ಲಕ್ಷ ಸೀಮ್ ಕಾರ್ಮಿಕರ ಸೇವಾ ಷರತ್ತುಗಳ ಸುಧಾರಣೆ ಪ್ರತ್ಯೇಕ ವೇತನ ಆಯೋಗ ಐಸಿಡಿಎಸ್ ಯೋಜನೆಯನ್ನು ಖಾಯಂಗೊಳಿಸಬೇಕು ಅಲ್ಲದೆ ಇದನ್ನು ಖಾಯಂ ಮಾಡುವತನಕ ಪ್ರತ್ಯೇಕ ನಿರ್ದೇಶನಾಲಯವನ್ನು ರಚಿಸಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಪ್ರಾಂತ ರೈತ ಸಂಘದ ಜಿಲ್ಲಾ ಹಿರಿಯ ಮುಖಂಡ ಪಾಂಡುರಂಗ ಮಾವಿನಕರ, ತಾಲೂಕು ಕಾರ್ಯದರ್ಶಿ ಸಲ್ಮಾನ ಖಾನ್ ನಗರ, ಪ್ರಮೋದ ಎನ್. ಪಂಚಾಳ, ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಪುಷ್ಪಾವತಿ ಚಟ್ಟಿ, ಕಾರ್ಯದರ್ಶಿ ರಾಜಮತಿ ಬಿ. ಪಾಟೀಲ, ಉಪಾಧ್ಯಕ್ಷೆ ಮಲ್ಲಮ್ಮಾ ಹೆಬಳಿ, ಶರಣಮ್ಮಾ ಸರಸಂಬಾ, ಇಂದುಮತಿ, ರೂಪಾ ಇಕ್ಕಳಕಿ ಸಮರ್ಥಾ ಸೇರಿದಂತೆ ಅನೇಕರು ಇದ್ದರು.

ಪರಿಸರದ ವಿನಾಶದಿಂದ ಮನುಕುಲಕ್ಕೆ ಉಳಿಗಾಲವಿಲ್ಲ: ಮಲ್ಲಿನಾಥ ಪಾಟೀಲ

ಶಹಾಬಾದ್, ಫೆ.13-

ಅಭಿವೃದ್ಧಿ ಹೆಸರಿನಲ್ಲಿ ಗಿಡ-ಮರಗಳನ್ನು ಕಡಿದು ಅರಣ್ಯ ಪ್ರದೇಶಗಳನ್ನು ನಾಶಪಡಿಸುತ್ತಿರುವ ಪರಿಣಾಮ ಜಾಗತಿಕ ತಾಪಮಾನ ಏರಿಕೆಯಾಗುತ್ತಿದ್ದು, ವನ್ಯಜೀವಿ ಸಂಕುಲಗಳು ವಿನಾಶದ ಅಂಚಿಗೆ ತಲುಪುತ್ತಿವೆ. ಪರಿಸರದ ವಿನಾಶದಿಂದ ಮನುಕುಲಕ್ಕೆ ಉಳಿಗಾಲವಿಲ್ಲ ಎಂದು ಎಸ್.ಜಿ. ವರ್ಮಾ ಹಿಂದಿ ಪ್ರೌಢಶಾಲೆಯ ಮುಖ್ಯಗುರು ಮಲ್ಲಿನಾಥ ಪಾಟೀಲ ಹೇಳಿದರು.

ತಾಲೂಕಿನ ಭಂಕೂರ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಪ್ರಕೃತಿ ಇಕೋ ಕ್ಲಬ್ ಹಾಗೂ ರಾಷ್ಟ್ರೀಯ ಹಸಿರು ಪಡೆಯ ವತಿಯಿಂದ ಆಯೋಜಿಸಿದ್ದ ಪರಿಸರ ಸಂರಕ್ಷಣೆಯ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಅವರು ಮಾತನಾಡಿದರು.



ಇಂದು ಪ್ರಾಣಿಗಳು ಅಳಿವಿನಂಚಿಗೆ ತಲುಪುತ್ತಿವೆ. ವಾಯುಮಾಲಿನ್ಯ ಮತ್ತು ಜಲಮಾಲಿನ್ಯ ಹೆಚ್ಚುತ್ತಿದ್ದು, ಅತಿಯಾದ ವಾಹನಗಳ ಹೊಗೆ ಜನರ ಆರೋಗ್ಯ ಮತ್ತು ವಾತಾವರಣದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಅರಣ್ಯ ಪ್ರಮಾಣ ಕಡಿಮೆಯಾಗುತ್ತಿದ್ದು, ಪರಿಸರ ನಾಶಕ್ಕೆ ಮಾನವನೇ ಕಾರಣ ಎಂಬುದು ವಿಷಾದನೀಯ. ಪರಿಸರ ಸಂರಕ್ಷಣೆಯತ್ತ ಎಲ್ಲರೂ ಜಾಗೃತರಾಗಬೇಕು ಎಂದು ಕರೆ ನೀಡಿದರು.

ಭಂಕೂರ ಸರ್ಕಾರಿ ಪ್ರೌಢಶಾಲೆಯ ಮುಖ್ಯಗುರು ಶಂಕರ ಜಾಧವ ಮಾತನಾಡಿದರು. ಶಿಕ್ಷಕರಾದ ದತ್ತಪ್ಪ ಕೋಟನೂರ್, ಶಿಕ್ಷಕಿ ಶಶಿಕಲಾ ಕೋಟನೂರ್ ಹಾಗೂ ಉಮೇಶ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅನೀಲಕುಮಾರ ಕುಮಸಿಕರ್ ಕಾರ್ಯಕ್ರಮ ನಿರೂಪಿಸಿ ಸ್ವಾಗತಿಸಿ ವಂದಿಸಿದರು. ಸಂಯೋಜಕ ಶಿಕ್ಷಕಿ ಸೀತಮ್ಮ ಎನ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ

ಬೀದರ್, ಫೆ.13-

ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ದೇಶದಾದ್ಯಂತ ನಡೆದ ಮುಷ್ಕರದ ಹಿನ್ನೆಲೆಯಲ್ಲಿ, ಗುರುವಾರ ನಗರದಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ ಹಾಗೂ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ವತಿಯಿಂದ ಬೃಹತ್ ಪ್ರತಿಭಟನೆ ನಡೆಯಿತು.

ನಗರದ ಅಂಬೇಡ್ಕರ್ ವೃತ್ತದ ಸಮೀಪ ಕರ್ನಾಟಕ ರಾಜ್ಯ ರೈತ ಸಂಘ, ಅಖಿಲ ಭಾರತ ಕಿಸಾನ್ ಸಭಾ, ದಲಿತ ಸಂಘರ್ಷ ಸಮಿತಿ, ಎಐಟಿಯುಸಿ, ಸಿಐಟಿಯು, ಎಐಯುಟಿಯುಸಿ ಸೇರಿದಂತೆ ಹಲವು ಸಂಘಟನೆಗಳ ನೂರಾರು ಕಾರ್ಯಕರ್ತರು ಮಾನವ ಸರಪಳಿ ನಿರ್ಮಿಸಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಸಹಾಯಕ ಆಯುಕ್ತರ ಮೂಲಕ ರಾಷ್ಟ್ರಪತಿ ಹಾಗೂ ಮುಖ್ಯಮಂತ್ರಿಗಳಿಗೆ ಸಲ್ಲಿಸಿದ ಮನವಿ ಪತ್ರದಲ್ಲಿ, ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮುಕ್ತ ವ್ಯಾಪಾರ ಒಪ್ಪಂದಗಳ ಮೂಲಕ ಬಹುರಾಷ್ಟ್ರೀಯ ಕಂಪನಿಗಳಿಗೆ ಅವಕಾಶ ಕಲ್ಪಿಸುತ್ತಿದ್ದು, ಇದರಿಂದ ದೇಶದ ಕೃಷಿ ವಲಯಕ್ಕೆ ಭಾರೀ ಹೊಡೆತ ಬೀಳಲಿದೆ ಎಂದು ಆರೋಪಿಸಲಾಗಿದೆ.

ಭಾರತದಲ್ಲಿ ಕೃಷಿ ವಲಯವು ಸುಮಾರು ಶೇ.50 ರಷ್ಟು ಉದ್ಯೋಗ ಒದಗಿಸುತ್ತಿದ್ದು, ಕಾರ್ಪೊರೇಟ್ ಪರ ನೀತಿಗಳಿಂದ ಕೃಷಿ ಮತ್ತು ಹೈನುಗಾರಿಕೆ ಕ್ಷೇತ್ರ ಸಂಕಷ್ಟಕ್ಕೆ ಸಿಲುಕಲಿದೆ. ದೇಶವು ಡಬ್ಲ್ಯೂಟಿಒದಿಂದ ಹೊರ ಬರಬೇಕು ಎಂದು ಆಗ್ರಹಿಸಲಾಗಿದೆ.



ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆಯುವಾಗ ನೀಡಿದ ಭರವಸೆಗಳನ್ನು ಕೇಂದ್ರ ಸರ್ಕಾರ ಈಡೇರಿಸಿಲ್ಲ. ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ)ಗೆ ಸಂಸತ್ತಿನಲ್ಲಿ ಕಾನೂನು ರೂಪಿಸಬೇಕು. ಭಾರತ-ಅಮೇರಿಕಾ ವ್ಯಾಪಾರ ಒಪ್ಪಂದವನ್ನು ರದ್ದುಪಡಿಸಬೇಕು. ರೈತರ ಎಲ್ಲಾ ಸಾಲ ಮನ್ನಾ ಮಾಡಬೇಕು ಎಂದು ಒತ್ತಾಯಿಸಲಾಗಿದೆ.

29 ಕಾರ್ಮಿಕ ಕಾಯ್ದೆಗಳನ್ನು ರದ್ದುಪಡಿಸಿ ಜಾರಿಗೆ ತರಲಾಗುತ್ತಿರುವ 4 ಕಾರ್ಮಿಕ ಸಂಹಿತೆಗಳನ್ನು ಹಿಂಪಡೆಯಬೇಕು. ಮನರೇಗಾ ಕಾಯ್ದೆ ಮುಂದುವರಿಸಬೇಕು. ಅಂಗನವಾಡಿ, ಆಶಾ ಮತ್ತು ಬಿಸಿಯೂಟ ಕಾರ್ಯಕರ್ತರಿಗೆ ತಿಂಗಳಿಗೆ 10,000 ರೂ. ನಿವೃತ್ತಿ ವೇತನ ಹಾಗೂ ಗ್ರೂಪ್-ಸಿ ನೌಕರರ ಹುದ್ದೆ ನೀಡಿ 25,000 ರೂ. ಸಂಬಳ ನಿಗದಿ ಮಾಡಬೇಕು.

ಕಟ್ಟಡ ಕಾರ್ಮಿಕರ ಪಿಂಚಣಿ ಬಿಡುಗಡೆ, ಮನೆ ಮಂಜೂರಾತಿಗೆ 5 ಲಕ್ಷ ರೂ. ಮತ್ತು ವೈದ್ಯಕೀಯ ವೆಚ್ಚಕ್ಕೆ ಪ್ರತಿ ತಿಂಗಳು 5,000 ರೂ. ನೀಡಬೇಕು. ವಿದ್ಯುತ್ ಮಸೂದೆ ಮತ್ತು ಬೀಜ ಮಸೂದೆ ಹಿಂಪಡೆಯಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎಸ್‌ಕೆಎಂ ಸಂಚಾಲಕ ಬಾಬುರಾವ್ ಹೊನ್ನಾ, ಕೆಆರ್‌ಆರ್‌ಎಸ್ (ಪುಟ್ಟಣ್ಣ) ಸಂಚಾಲಕ ಮಲ್ಲಿಕಾರ್ಜುನ್ ಸ್ವಾಮಿ, ನಾಗಶೆಟ್ಟಿ ಲಂಜವಾಡ್, ಡಿಎಸ್‌ಎಸ್‌ನ ಅರುಣ್ ಪಟೇಲ್, ಎಐಕೆಎಸ್ ಗೌರವಾಧ್ಯಕ್ಷ ವಿರಶೆಟ್ಟಿ ವಟಂಬೆ, ಜೆಸಿಟಿಯು ಸಂಚಾಲಕ ಮಹೇಶ್ ನಾಡಗೌಡ, ಎಐಕೆಎಸ್ ಜಿಲ್ಲಾಧ್ಯಕ್ಷ ನಜೀರ್ ಅಹಮ್ಮದ್ ಸೇರಿದಂತೆ ಅನೇಕ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ಅಖಿಲ ಭಾರತ ಸಾರ್ವತ್ರಿಕ ಮುಷ್ಕರ : ಹುಮನಾಬಾದ್ ನಲ್ಲಿ ಪ್ರತಿಭಟನೆ



ಹುಮನಾಬಾದ್, ಫೆ.13-

ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ದೇಶದಾದ್ಯಂತ ನಡೆದ ಮುಷ್ಕರಕ್ಕೆ ಬೆಂಬಲ ಸೂಚಿಸಿ, ಗುರುವಾರ ಹುಮನಾಬಾದ್ ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ಅಂಬೇಡ್ಕರ್ ವೃತ್ತದವರೆಗೆ ಸಾಗಿತು. ಅಲ್ಲಿ ಪ್ರತಿಭಟನಾಕಾರರು ಮಾನವ ಸರಪಳಿ ನಿರ್ಮಿಸಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಸಿಐಟಿಯು, ಹುಮನಾಬಾದ್ ಹಾಗೂ ಚಿಟಗುಪ್ಪ ತಾಲೂಕು ಕಟ್ಟಡ ಕಾರ್ಮಿಕರ ಸಂಘ, ಅಂಗನವಾಡಿ ಮತ್ತು ಬಿಸಿಯೂಟ ನೌಕರರ ಸಂಘ, ರೈತ ಸಂಘ, ಕೃಷಿ ಕೂಲಿಕಾರರ ಸಂಘ, ಜನವಾದಿ ಮಹಿಳಾ ಸಂಘಟನೆ ಸೇರಿದಂತೆ ಹಲವು ಸಂಘಟನೆಗಳು ಭಾಗವಹಿಸಿದ್ದವು.

ಕಟ್ಟಡ ಕಾರ್ಮಿಕ ತಾಲೂಕು ಅಧ್ಯಕ್ಷ ಶಶಿಕುಮಾರ್ ಡಾಂಗೆ ಮಾತನಾಡಿ, ಕೇಂದ್ರ ಸರ್ಕಾರ ಕಾರ್ಪೊರೇಟ್ ಪರ ನೀತಿಗಳನ್ನು ಅನುಸರಿಸುತ್ತಿದ್ದು, ಬಡವರು ಮತ್ತು ಕಾರ್ಮಿಕರ ಮೇಲೆ ಭಾರ ಹೆಚ್ಚಿಸುತ್ತಿದೆ ಎಂದು ಆರೋಪಿಸಿದರು. ಕೂಲಿ ಕಾರ್ಮಿಕರು ಮತ್ತು ರೈತರ ವಿರುದ್ಧ ಕಾನೂನು ತರುವ ಕ್ರಮಗಳನ್ನು ಖಂಡಿಸಿ, ಇಂತಹ ಸರ್ಕಾರ ನಮಗೆ ಬೇಕಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸಬೇಕು. ರಾಜ್ಯ ಸರ್ಕಾರ ಕಾರ್ಮಿಕ ಸಮಿತಿಗಳಿಗೆ ತಂದಿರುವ ಕರಡು ಅಧಿಸೂಚನೆಗಳನ್ನು ವಾಪಸ್ಸು ಪಡೆಯಬೇಕು. ಮನರೇಗಾ ಯೋಜನೆಯನ್ನು ಪುನರ್ ಸ್ಥಾಪಿಸಬೇಕು. ಕೃಷಿ ವಿರೋಧಿ ತಿದ್ದುಪಡಿ, ವಿದ್ಯುತ್ ಮಸೂದೆ ಹಾಗೂ ವಿಮಾ ತಿದ್ದುಪಡಿ ಕಾಯ್ದೆಗಳನ್ನು ಹಿಂಪಡೆಯಬೇಕು. ಕನಿಷ್ಠ ವೇತನ ಅಧಿಸೂಚನೆ ಜಾರಿಗೆ ತರಬೇಕು ಎಂದು ಆಗ್ರಹಿಸಲಾಯಿತು.

ಸ್ಕೀಮ್ ನೌಕರರನ್ನು ಕಾರ್ಮಿಕರೆಂದು ಪರಿಗಣಿಸಿ ಕನಿಷ್ಠ ವೇತನ ಕಾಯ್ದೆ ಜಾರಿಗೊಳಿಸಬೇಕು. ಅಸಂಘಟಿತ ಕಾರ್ಮಿಕರಿಗೆ ಸಮಗ್ರ ಸಾಮಾಜಿಕ ಭದ್ರತೆ ಸೌಲಭ್ಯ ಒದಗಿಸಬೇಕು. ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಜಾರಿಗೊಳಿಸಬೇಕು. ಅಗತ್ಯ ವಸ್ತುಗಳ ಬೆಲೆ ಏರಿಕೆ ನಿಯಂತ್ರಿಸಬೇಕು. ಮೋಟಾರು ವಾಹನ ತಿದ್ದುಪಡಿ ಕಾಯ್ದೆಯಡಿ ವಿಧಿಸಿರುವ ದುಬಾರಿ ದಂಡಗಳನ್ನು ಕಡಿತಗೊಳಿಸಬೇಕು ಎಂದು ಒತ್ತಾಯಿಸಿದರು.

ಸಿಐಟಿಯು ಅಧ್ಯಕ್ಷ ಪ್ರಭು ಸಂತೋಷಕರ್, ಜನವಾದಿ ಮಹಿಳಾ ಸಂಘದ ಜಿಲ್ಲಾ ಕಾರ್ಯದರ್ಶಿ ರೇಷ್ಮಾ, ಅಕ್ಷರ ದಾಸೋಹ ನೌಕರ ಸಂಘದ ಅಧ್ಯಕ್ಷೆ ರೇಖಾ, ಅಂಗನವಾಡಿ ನೌಕರರ ಸಂಘದ ಕಾರ್ಯದರ್ಶಿ ಜಗದೇವಿ ಪತ್ರಿ, ಕಾರ್ಮಿಕ ಸಂಘದ ಗೌಸೊದ್ದೀನ್ ಸೇರಿದಂತೆ ಹುಮನಾಬಾದ್ ಹಾಗೂ ಚಿಟಗುಪ್ಪ ಭಾಗದ ಕಾರ್ಮಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

29 ಕಾರ್ಮಿಕ ಕಾಯ್ದೆಗಳನ್ನು ರದ್ದುಪಡಿಸಿ ಜಾರಿಗೆ ತರಲಾಗುತ್ತಿರುವ 4 ಕಾರ್ಮಿಕ ಸಂಹಿತೆಗಳನ್ನು ಹಿಂಪಡೆಯಬೇಕು. ಮನರೇಗಾ ಕಾಯ್ದೆ ಮುಂದುವರಿಸಬೇಕು. ಅಂಗನವಾಡಿ, ಆಶಾ ಮತ್ತು ಬಿಸಿಯೂಟ ಕಾರ್ಯಕರ್ತರಿಗೆ ತಿಂಗಳಿಗೆ 10,000 ರೂ. ನಿವೃತ್ತಿ ವೇತನ ಹಾಗೂ ಗ್ರೂಪ್-ಸಿ ನೌಕರರ ಹುದ್ದೆ ನೀಡಿ 25,000 ರೂ. ಸಂಬಳ ನಿಗದಿ ಮಾಡಬೇಕು.

ಕಟ್ಟಡ ಕಾರ್ಮಿಕರ ಪಿಂಚಣಿ ಬಿಡುಗಡೆ, ಮನೆ ಮಂಜೂರಾತಿಗೆ 5 ಲಕ್ಷ ರೂ. ಮತ್ತು ವೈದ್ಯಕೀಯ ವೆಚ್ಚಕ್ಕೆ ಪ್ರತಿ ತಿಂಗಳು 5,000 ರೂ. ನೀಡಬೇಕು. ವಿದ್ಯುತ್ ಮಸೂದೆ ಮತ್ತು ಬೀಜ ಮಸೂದೆ ಹಿಂಪಡೆಯಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎಸ್‌ಕೆಎಂ ಸಂಚಾಲಕ ಬಾಬುರಾವ್ ಹೊನ್ನಾ, ಕೆಆರ್‌ಆರ್‌ಎಸ್ (ಪುಟ್ಟಣ್ಣ) ಸಂಚಾಲಕ ಮಲ್ಲಿಕಾರ್ಜುನ್ ಸ್ವಾಮಿ, ನಾಗಶೆಟ್ಟಿ ಲಂಜವಾಡ್, ಡಿಎಸ್‌ಎಸ್‌ನ ಸೇರಿದಂತೆ ಅನೇಕ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ಕಂಪ್ಲಿ ಉತ್ಸವಕ್ಕೆ ವಿದ್ಯುಕ್ತ ಚಾಲನೆ



ಬಳ್ಳಾರಿ / ಕಂಪ್ಲಿ , ಫೆ.13-

ಐತಿಹಾಸಿಕ ಸೋಮಪ್ಪ ದೇವಸ್ಥಾನ ಮುಂಭಾಗದ ಕೆರೆ ಸನ್ನಿಧಾನದಲ್ಲಿ ನಡೆದ ಎರಡನೇ ಬಾರಿಯ ಕಂಪ್ಲಿ ಉತ್ಸವದ ಅಂಗವಾಗಿ ಬುಧವಾರ ರಾತ್ರಿ ಶಾಸಕ ಜೆ.ಎನ್.ಗಣೇಶ ಅವರ ನೇತೃತ್ವದಲ್ಲಿ ವಿಜೃಂಭಣೆಯಿಂದ ನಡೆದ ತುಂಗಭದ್ರಾ ಆರತಿ ಕಾರ್ಯಕ್ರಮಕ್ಕೆ ಸಹಸ್ರಾರು ಜನರು ಸಾಕ್ಷಿಯಾದರು.

ಭವ್ಯ ಮೆರವಣಿಗೆ ಸೋಮಪ್ಪ ಕೆರೆ ತಲುಪಿದ ಬಳಿಕ ವಾರಾಣಸಿಯ ಗಂಗಾರತಿ ತಂಡದವರು ವಿಶೇಷ ಪೂಜಾ ವಿಧಿಗಳೊಂದಿಗೆ ಆರತಿ ನೆರವೇರಿಸಿದರು. ಈ ಮೂಲಕ ಉತ್ಸವಕ್ಕೆ ಅದ್ಧೂರಿ ಚಾಲನೆ ದೊರೆಯಿತು.

ಜಿಲ್ಲಾ ಉಸ್ತುವಾರಿ ಸಚಿವ ಝಮೀರ್ ಅಹ್ಮದ್ ಅವರ ಸಮ್ಮುಖದಲ್ಲಿ ಶಾಸಕ ಜೆ.ಎನ್. ಗಣೇಶ ಅವರು ಕೆರೆಗೆ ಬಾಗಿನ ಅರ್ಪಿಸಿದರು. ಬಳಿಕ ತುಂಗಭದ್ರಾ ಆರತಿಯನ್ನು ವಿದ್ಯುಕ್ತವಾಗಿ ನೆರವೇರಿಸಿ ಉತ್ಸವಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಹಂಪಿ ಸಾವಿರ ದೇವರ ಮಠದ ವಾಮದೇವ ಮಹಾಂತ ಶಿವಾಚಾರ್ಯ ಮಹಾಸ್ವಾಮಿಗಳು, ಶಾಸಕ ಗಣೇಶ ಅವರ ಧರ್ಮಪತ್ನಿ ಶ್ರೀದೇವಿ, ಮಾಜಿ ಶಾಸಕ ಭೀಮನಾಯ್ಕ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರವೀಂದ್ರಕುಮಾರ, ಡಿವೈಎಸ್‌ಪಿ ಪ್ರಸಾದ್ ಗೋಖುಲೆ, ಅಪರ ಜಿಲ್ಲಾಧಿಕಾರಿ ಜುಬೇರ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಚಿದಾನಂದ, ತಾಲೂಕು ಗ್ಯಾರಂಟಿ ಅಧ್ಯಕ್ಷ ಕೆ. ಶ್ರೀನಿವಾಸರಾವ್, ಎಪಿಎಂಸಿ ಅಧ್ಯಕ್ಷ ಹಬೀಬ್ ರೆಹಮಾನ್, ತಹಶೀಲ್ದಾರ್ ಜೂಗಲ್ ಮಂಜುನಾಯಕ, ಮುಖ್ಯಾಧಿಕಾರಿ ಬಿ. ಮಲ್ಲಿಕಾರ್ಜುನ ಸೇರಿದಂತೆ ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

ತುಂಗಭದ್ರಾ ಆರತಿಯ ಹಿನ್ನಲೆಯಲ್ಲಿ ಏಕಕಾಲದಲ್ಲಿ 18 ವೇದಿಕೆಗಳಲ್ಲಿ ಭರತನಾಟ್ಯ ನೃತ್ಯ ಪ್ರದರ್ಶನ ನಡೆಯಿತು. ಆರತಿ ಕಾರ್ಯಕ್ರಮದ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕಣ್ತುಂಬಿಕೊಂಡ ಜನರು ಉತ್ಸವದ ಸಂಭ್ರಮವನ್ನು ಆಸ್ವಾದಿಸಿದರು.

ಮುಖ್ಯಮಂತ್ರಿ ಬದಲಾವಣೆ ವಿಚಾರ ಶಿವಕುಮಾರ್ ಅವರನ್ನೇ ಕೇಳಿ: ರಾಮಲಿಂಗಾರೆಡ್ಡಿ

ಬೀದರ್, ಫೆ.13-

ಮುಖ್ಯಮಂತ್ರಿ ಬದಲಾವಣೆಯ ವಿಚಾರ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನೇ ಕೇಳಿ. ಮಾಧ್ಯಮದವರಿಗೆ ಎಷ್ಟು ಗೊತ್ತಿದೆಯೋ ನನಗೂ ಅಷ್ಟೇ ಗೊತ್ತು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ನಗರದ ವಿಮಾನ ನಿಲ್ದಾಣದಲ್ಲಿ ಶುಕ್ರವಾರ ಪತ್ರಕರ್ತರ ಪ್ರಶ್ನೆಗೆ ಮೇಲಿನಂತೆ ಪ್ರತಿಕ್ರಿಯಿಸಿದರು.

ನಾಯಕತ್ವ ಬದಲಾವಣೆ ವಿಷಯವಾಗಿ ನಾನು ಏನೂ ಮಾತನಾ ಡುವುದಿಲ್ಲ. ನಾನು ಏನಾದರೂ ಮಾತನಾಡಿದರೆ ಅದರಿಂದ ಪಕ್ಷಕ್ಕೆ ಹಾನಿಯಾಗುತ್ತದೆ. ಮಾಧ್ಯಮದವರು ರಾಮಲಿಂಗಾರೆಡ್ಡಿ ಸಿಎಂ ಆಗಬೇಕು ಅಂತ ಹೇಳುತ್ತಾರೆ. ಆದರೆ, ಬೇರೆ ಯಾರೂ ಇದನ್ನು ಹೇಳುವುದಿಲ್ಲ. ಮನುಷ್ಯ ಆಸೆಪಟ್ಟಿದ್ದೆಲ್ಲ ಆಗುತ್ತದೆಯೇ ಎಂದು ಪ್ರಶ್ನಿಸಿದರು. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಹಾಗೂ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳನ್ನು ಆಯೋಜಿಸಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ (ಕೆಎಸ್‌ಸಿಎ) ಸಂಪುಟ ಒಪ್ಪಿಗೆ ನೀಡಿದೆ. ಕ್ರಿಕೆಟ್ ಆಟ ಇಷ್ಟಪಡುವವರ ಬೇಡಿಕೆಯನ್ನು ಪರಿಗಣಿಸಿ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಹೇಳಿದರು.



ಸರ್ಕಾರಿ ಶಾಲೆಗೆ ಸೆಕ್ಯುರಿಟಿ ಗಾರ್ಡ್ ನಿಯೋಜನೆ! ತೇರದಾಳ ಶಾಲೆಯ ಮಾದರಿ ನಡೆ

ತೇರದಾಳ,ಫೆ.12-

ಸರ್ಕಾರಿ ಶಾಲೆಯ ಶಿಕ್ಷಕರಿಗೆ ಪಾಠ ಬೋಧನೆಗಿಂತ ಇತರ ಕೆಲಸಗಳ ಭಾರ ಹೆಚ್ಚಿವೆ. ಹೀಗಿದ್ದೂ ಶಾಲಾ ಆವರಣ ಶುಚಿಗೊಳಿಸಲು, ಶೌಚಾಲಯ ಶುಚಿತ್ವ ಕಾಪಾಡಲು ಮಕ್ಕಳನ್ನು ಬಳಸಿದರೆ ತಪ್ಪಾಗುತ್ತದೆ.

ಹಾಗಂತ ಶಿಕ್ಷಕರೂ ಈ ಕಾರ್ಯ ಮಾಡುವುದು ಅಸಾಧ್ಯ. ಹೀಗಾಗಿ ತೇರದಾಳದ ಶಾಲೆಯೊಂದಕ್ಕೆ ಅಲ್ಲಿನ ಮುಖ್ಯ ಶಿಕ್ಷಕರು, ಸೆಕ್ಯುರಿಟಿ ಗಾರ್ಡ್ ನೇಮಿಸಿದ್ದಾರೆ.

ಪಟ್ಟಣದ ಸರ್ಕಾರಿ ಕನ್ನಡ ಹೆಣ್ಣುಮಕ್ಕಳ ಶಾಲೆ ಮಾರುಕಟ್ಟೆಯ ಮಧ್ಯದಲ್ಲಿಯೇ ಇದೆ. ಹೀಗಾಗಿ ಅವರಿವರು ಶಾಲಾ ಆವರಣದೊಳಗೆ ಬಂದು ಹೋಗುವುದು ಸಾಮಾನ್ಯವಾಗಿತ್ತು. ಅದು ಹೇಳಿ ಕೇಳಿ ಹೆಣ್ಣುಮಕ್ಕಳ



ಶಾಲೆ. ಬಾಲಕರ ಶಾಲೆಯೊಂದಿಗೆ ವಿಲೀನವಾಗಿದ್ದರೂ ಬಾಲಕಿಯರ ಸಂಖ್ಯೆಯೇ ಹೆಚ್ಚಾಗಿದೆ. ಇದೇ ಆವರಣದಲ್ಲಿನ ಕಟ್ಟಡದಲ್ಲಿ ಉನ್ನತೀಕರಿಸಿದ ಪ್ರೌಢಶಾಲೆ ಕೂಡ ಆರಂಭವಾಗಿದೆ. ಇಲ್ಲಿನ ಮಕ್ಕಳ ರಕ್ಷಣೆ ಜೊತೆಗೆ ಶಾಲೆ ಸ್ವಚ್ಛವಾಗಿಡಲು ಒಬ್ಬ ಕೆಲಸಗಾರನ ಅವಶ್ಯಕತೆಯಿತ್ತು. ಆದರೆ ಸರ್ಕಾರದಲ್ಲಿ ಪ್ರಾಥಮಿಕ ಶಾಲೆಯಲ್ಲಿ ಇದಕ್ಕೆ ಅವಕಾಶ ಇಲ್ಲದ್ದನ್ನು ಮನಗಂಡು ಶಾಲಾ ಮುಖ್ಯ ಶಿಕ್ಷಕ ಕೆ.ಡಿ.ಮಾಲಗಾಂವಿ ತಮ್ಮ ಸ್ವಂತ ಹಣದಿಂದ ಭರಮಪ್ಪ ಶೇಡಬಾಳ ಅವರನ್ನು ಪ್ರತಿ ತಿಂಗಳು ವೇತನ ನೀಡುವ ಭರವಸೆ ನೀಡಿ ಕೆಲಸಕ್ಕೆ ನೇಮಿಸಿದ್ದಾರೆ.

ಇದರಿಂದ ಇದೇ ಆವರಣದ ಕೊನೆಯಲ್ಲಿರುವ ಅಂಗನವಾಡಿ ಮಕ್ಕಳನ್ನು ಕರೆಯಲು ಬರುತ್ತಿದ್ದ ಪಾಲಕರ ಬೈಕ್, ಬೇಕಾಬಿಟ್ಟಿ ಪಾರ್ಕಿಂಗ್ ಮಾಡುವ ಬೈಕ್ ಸವಾರರ ಉಪಟಳ ತಪ್ಪಿದೆ. ಇವರು ಶಾಲಾ ಆವರಣ ಕಾಯುವುದು ಮಾತ್ರವಲ್ಲ. ಶೌಚಾಲಯ ಶುಚಿಗೊಳಿಸುವ ಕಾರ್ಯವನ್ನೂ ಮಾಡುತ್ತಾರೆ.

ರಕ್ಷಣಾ ಸಿಬ್ಬಂದಿ ಗೇಟ್ ಬಳಿ ಕುಳಿತಿದ್ದನ್ನು ಕಂಡರೆ ಇದ್ಯಾವುದೋ ಖಾಸಗಿ ಶಾಲೆ ಇರಬೇಕೆಂಬ ಭಾವನೆ ಬರುತ್ತದೆ. ರಕ್ಷಣಾ ಸಿಬ್ಬಂದಿಗೆ ಚಂದ್ರು ಎಂಬವರು ಸೆಕ್ಯುರಿಟಿ ಸಮವಸ್ತ್ರ, ಟೋಪಿಯನ್ನು ಕಾಣಿಕೆಯಾಗಿ ನೀಡಿದ್ದಾರೆ. ಕ್ಷೇತ್ರ ಶಿಕ್ಷಣಾಧಿಕಾರಿ ಎ.ಕೆ. ಬಸಣ್ಣವರ ಅವರು ಈ ಕಾರ್ಯವನ್ನು ಮೆಚ್ಚಿಕೊಂಡಿದ್ದಾರೆ ಎನ್ನುತ್ತಾರೆ ಕೆ.ಡಿ. ಮಾಲಗಾಂವಿ.

ಒಂದನೇಯ ಪುಟದಿಂದ

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ

ಸುಧಾರಣೆಗೆ ಕ್ರಮವಹಿಸಲು ಜಿಲ್ಲಾಧಿಕಾರಿ ಸೂಚನೆ

ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಸನ್ನದ್ಧಗೊಳಿಸಲು ಪೂರಕ ಬೋಧನೆ ಮತ್ತು ಪುನರಾವರ್ತನೆಗೆ ಆದ್ಯತೆ ನೀಡಬೇಕು. ಅಲ್ಲದೆ ಹಿಂದುಳಿದ ವಿದ್ಯಾರ್ಥಿಗಳನ್ನು ಶಿಕ್ಷಕರು ದತ್ತು ಪಡೆದು ವೈಯಕ್ತಿಕ ಮಾರ್ಗದರ್ಶನ ನೀಡುವ ಜೊತೆಗೆ ಪರೀಕ್ಷಾ ದೃಷ್ಟಿಯಿಂದ ಪ್ರಮುಖವಾಗಿರುವ ವಿಷಯಗಳ ಬಗ್ಗೆ ಹೆಚ್ಚಿನ ತರಬೇತಿ ನೀಡಬೇಕೆಂದರು.

ಇದೇ ಸಂದರ್ಭದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಕೆ.ಡಿ.ಬಡಿಗೇರ ಸೇರಿದಂತೆ ಜಿಲ್ಲೆಯ ವಿವಿಧ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಿಆರ್.ಪಿ, ಬಿಆರ್ ಪಿ ಸೇರಿದಂತೆ ವಿವಿಧ ಶಾಲೆಯ ಮುಖ್ಯಗುರುಗಳು ಇದ್ದರು.

ರಾಯಚೂರಿನ ಘನತ್ಯಾಜ್ಯ ಸಂಪನ್ಮೂಲ ಪುನರ್ಬಳಕೆ ನಿರ್ವಹಣಾ ಘಟಕದ ಸ್ಥಳಕ್ಕೆ ಪ್ರಾದೇಶಿಕ ಆಯುಕ್ತರು ಭೇಟಿ

ಮಾವಿನ ಕೆರೆ ಪ್ರದೇಶಕ್ಕೆ ಭೇಟಿ: ರಾಯಚೂರು ಪ್ರವಾಸದಲ್ಲಿದ್ದ ಪ್ರಾದೇಶಿಕ ಆಯುಕ್ತರು, ಮಾವಿನ ಕೆರೆ ಪ್ರದೇಶಕ್ಕೆ ಭೇಟಿ ನೀಡಿದರು. ಮಾವಿನಕೆರೆ ಕೆರೆ ದಡದ ಮೇಲೆ ಕೈಗೊಂಡ ಕಾಮಗಾರಿ, ಉದ್ಯಾನ ನಿರ್ಮಾಣ, ಫುಟ್ ಪಾತ್ ನಿರ್ಮಾಣದ ಕಾಮಗಾರಿ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಕೆರೆಗೆ ನೀರು ಕಡಿಮೆಯಾದಾಗಲು ಸಹ ಉದ್ಯಾನ ನಿರ್ವಹಣೆಯು ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳಲು ಆಯುಕ್ತರು ಸಲಹೆ ಮಾಡಿದರು.

ಈ ಸಂದರ್ಭದಲ್ಲಿ ಪಾಲಿಕೆಯ ಸಮಿತಿಯ ಕಾರ್ಯದರ್ಶಿ ಕೃಷ್ಣ ಶಾವಂತಗೇರಿ, ಉಪ ಆಯುಕ್ತರಾದ ಶರಣಪ್ಪ ಸತ್ಯಂಪೇಟೆ, ಸಂತೋಷ ರಾಣಿ ಸೇರಿದಂತೆ ಪಾಲಿಕೆಯ ಇನ್ನಿತರ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಫೆ.16ರಂದು ರಾಯಚೂರು ಜಿಲ್ಲೆಯಲ್ಲಿ ಸಲೀಂ ಅಹ್ಮದ್ ಪ್ರವಾಸ

ಮಹಿಳಾ ಸಮಾಜದ ಆವರಣದಲ್ಲಿ ನಡೆಯುವ ಉಮ್ರಾ ಯಾತ್ರಿಗಳ ಕಾರ್ಯಕ್ರಮದಲ್ಲಿ ಭಾಗವಹಿಸುವರು. ರಾತ್ರಿ 11.10ಕ್ಕೆ ರಾಯಚೂರಿನಿಂದ ರೈಲು ಮಾರ್ಗವಾಗಿ ಹೊರಟು ಕೇಂದ್ರ ಸ್ಥಾನ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ವಿಧಾನ ಪರಿಷತ್ತಿನ ಸರ್ಕಾರಿ ಮುಖ್ಯ ಸಚೇತಕರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾಡಳಿತದಿಂದ ಫೆ.15ರಂದು ಸಂತ ಶ್ರೀಸೇವಾಲಾಲ್ ಜಯಂತಿ

ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಆರ್ಥಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ರಿತೇಶಕುಮಾರ ಸಿಂಗ್, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಶು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

ಲಿಂಗಸುಗೂರಿನ ಉಪನ್ಯಾಸಕರಾದ ಶಂಕರ ಎಂ.ಪವಾರ್ ಅವರು ಸಂತ ಶ್ರೀಸೇವಾಲಾಲ್ ಅವರ ಕುರಿತು ಉಪನ್ಯಾಸ ನೀಡುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುರಕ್ಷಿತ ಅಂತರ್ಜಾಲ ದಿನ-2026ರ ಕಾರ್ಯಾಗಾರ ಸುರಕ್ಷಿತ, ಜವಾಬ್ದಾರಿಯುತ ಅಂತರ್ಜಾಲ ಬಳಕೆ ಅತಿಮುಖ್ಯ : ಹಾಲಸಿದ್ದಪ್ಪ ಪೂಜಾರಿ ಸಲಹೆ

ಜವಾಬ್ದಾರಿಯುತ ಬಳಕೆಯನ್ನು ಅನ್ವೇಷಿಸುವುದು ಎಂಬುದು ಈ ವರ್ಷದ ಸುರಕ್ಷಿತ ಅಂತರ್ಜಾಲ ಬಳಕೆ ದಿನದ ಘೋಷವಾಕ್ಯ. ಅಂತರ್ಜಾಲ ವಂಚನೆ ಕುರಿತು ಜಾಗೃತಿ ಮೂಡಿಸುವುದು ಹಾಗೂ ಸುರಕ್ಷಿತ ಅಂತರ್ಜಾಲ ಬಳಕೆ ಬಗ್ಗೆ ತಿಳಿವಳಿಕೆ ಮೂಡಿಸುವುದು ಈ ದಿನದ ಮುಖ್ಯ ಉದ್ದೇಶ ಎಂದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿ ಡಾ.ವಿಜಯಶಂಕರ್, ಜಿಲ್ಲಾಧಿಕಾರಿಗಳ ಕಚೇರಿಯ ತಹಶೀಲ್ದಾರ್ ಜಗದೀಶ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಇದ್ದರು. ನರೇಗಾ ಜಿಲ್ಲಾ ಸಮನ್ವಯ ಅಧಿಕಾರಿ ಮಲ್ಲಮ್ಮ ನಿರೂಪಿಸಿದರು.

ನಾಲ್ಕು ಕಾರ್ಮಿಕ ಸಂಹಿತೆಗಳು ಹಿಂಪಡೆಯಬೇಕು: ಶರಣಬಸು ಸಿರೂರಕರ ಆಗ್ರಹ



ವಾಡಿ, ಫೆ.13-

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನಾಲ್ಕು ಹೊಸ ಕಾರ್ಮಿಕ ಕಾನೂನುಗಳು ಕಾರ್ಪೊರೇಟ್ ಪರವಾಗಿದ್ದು, ಕಾರ್ಮಿಕರ ಕೆಲಸದ ಭದ್ರತೆ ಹಾಗೂ ಸಾಮಾಜಿಕ ಭದ್ರತೆಯನ್ನು ಕಸಿದುಕೊಳ್ಳುವ ಹುನ್ನಾರವಾಗಿದೆ. ಈ ಕಾನೂನುಗಳನ್ನು ಕೂಡಲೇ ಹಿಂಪಡೆಯಬೇಕು ಎಂದು ವಾಡಿ ಸಿಮೆಂಟ್ ಕಾರ್ಖಾನೆ ಕಾರ್ಮಿಕರು ಮತ್ತು ಸಿಬ್ಬಂದಿ ಸಂಘದ ಅಧ್ಯಕ್ಷ ಶರಣಬಸು ಸಿರೂರಕರ ಆಗ್ರಹಿಸಿದರು.

ಗುರುವಾರ ಪಟ್ಟಣದ ಎಸಿಸಿ ಕಾರ್ಖಾನೆ ಮುಂಭಾಗದಲ್ಲಿ ನಾಲ್ಕು ಕಾರ್ಮಿಕ ಕೋಡ್‌ಗಳನ್ನು ವಿರೋಧಿಸಿ ಹಮ್ಮಿಕೊಂಡ ಪ್ರತಿಭಟನೆ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಕಾರ್ಮಿಕರು ಸಂಘಟಿತರಾಗುವ ಹಕ್ಕನ್ನು ದುರ್ಬಲಗೊಳಿಸುವ ಜೊತೆಗೆ ಅವರನ್ನು ಜೀತದಾಳುಗಳನ್ನಾಗಿ ಮಾಡುವ ಉದ್ದೇಶ ಈ ಕಾನೂನುಗಳಲ್ಲಿದೆ ಎಂದು ಅವರು ಆರೋಪಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ವಿಶಾಲ್ ನಂದೂರಕರ ಮಾತನಾಡಿ, ಪ್ರತಿದಿನ 8 ಗಂಟೆಗಳಿಗಿಂತ ಹೆಚ್ಚು ಕೆಲಸ ಮಾಡುವ ನಿಯಮಗಳನ್ನು ಸೇರಿಸುವ ಮೂಲಕ ಕಾರ್ಮಿಕರ ಸುರಕ್ಷತೆಯಲ್ಲಿ ನಿರ್ಲಕ್ಷ್ಯ ತೋರಲಾಗಿದೆ. ಕಾರ್ಮಿಕರ ಪರವಾಗಿ ಕೆಲಸ ಮಾಡುವ ಯೂನಿಯನ್‌ಗಳನ್ನು ದುರ್ಬಲಗೊಳಿಸಿ, ಸಂಘಟಿತ ಹೋರಾಟದ ಹಕ್ಕನ್ನು ಈ ಹೊಸ ಕಾರ್ಮಿಕ ಸಂಹಿತೆಗಳು ಕಡಿತಗೊಳಿಸುತ್ತವೆ ಎಂದು ಆತಂಕ ವ್ಯಕ್ತಪಡಿಸಿದರು.

ನವೆಂಬರ್ 21, 2025ರಿಂದ ಜಾರಿಗೆ ಬಂದಿರುವ ಈ ಕಾನೂನುಗಳನ್ನು ತಕ್ಷಣವೇ ಹಿಂಪಡೆಯಬೇಕು. ರೈತಕಾರ್ಮಿಕ ವಿರೋಧಿ ನೀತಿಗಳನ್ನು ಕೇಂದ್ರ ಸರ್ಕಾರ ವೇಗವಾಗಿ ಜಾರಿಗೊಳಿಸುತ್ತಿದ್ದು, ಕಾರ್ಪೊರೇಟ್ ದಣಿಗಳ ಪರ ಕಾರ್ಯನಿರ್ವಹಿಸುತ್ತಿದೆ ಎಂದು ಟೀಕಿಸಿದರು.

ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಹಿಂಪಡೆಯದಿದ್ದರೆ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಅವಿನಾಶ ರಾಠೋಡ್, ಅನಿಲಕುಮಾರ ಸಿಬೋನೂರ, ದೀಪಕ್ ಪೂಜಾರಿ, ಜಂಟಿ ಕಾರ್ಯದರ್ಶಿಗಳು ಅಹಸನ್ ಅಲಿ, ಸತೀಶ ಭಾಗೋಡಿಕರ್, ಸಂಜಯ ರಾಥೋಡ, ಖಜಾಂಚಿ ಉಮೇಶ ಪವಾರ ಹಾಗೂ ಕಾರ್ಮಿಕರು ಎಂ.ಡಿ. ಜಾಫರ್, ಬಸವರಾಜ ಪೂಜಾರಿ, ಯಲ್ಲಾಲಿಂಗ, ಧರ್ಮ, ಮರಲಿಂಗ ಕೊಲ್ಲೂರು, ಜಗನ್ನಾಥ ರಾಥೋಡ, ಯಂಕಪ್ಪ ದಾಸ, ಕಿಶನ ಪವಾರ, ಅಬ್ದುಲ್ ನಬಿ, ಸುನೀಲ ರಾವೂರ, ತೇಜಪ್ಪ, ನಾಗರಾಜ ಮಾಡಗಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸ್ಪರ್ಧಾತ್ಮಕ ಯುಗದಲ್ಲಿ ಮೃದು ಕೌಶಲ್ಯಗಳೇ ಯಶಸ್ಸಿನ ಮಂತ್ರ : ಡಾ.ಶುಷ್ಮಾ



ಆಳಂದ,ಫೆ.13-

ಲಿಂಕ್ಡ್‌ಇನ್ ನ ಇತ್ತೀಚಿನ ಸಂಶೋಧನೆಯ ಪ್ರಕಾರ ಶೇ.85 ರಷ್ಟು ಉದ್ಯೋಗ ಯಶಸ್ಸು ಮೃದು ಕೌಶಲ್ಯಗಳಿಂದ ಸಾಧ್ಯವಾಗುತ್ತದೆ. ಐಐಟಿ ಸಂಶೋಧನೆ ಪ್ರಕಾರ ಹೆಚ್ಚಿನ ಭಾವನಾತ್ಮಕ ಬುದ್ಧಿಮತ್ತೆ ಹೊಂದಿರುವ ಎಂಜಿನಿಯರ್‌ಗಳ ತಂಡಗಳು ಇತರರಿಗಿಂತ ಶೇ.20 ರಷ್ಟು ವೇಗವಾಗಿ ಹೊಸ ಮಾದರಿಗಳನ್ನು ಅಭಿವೃದ್ಧಿಪಡಿಸುತ್ತವೆ ಎಂದು ಸಿಯುಕೆಯ ಸಾಫ್ಟ್ ಸ್ಕಿಲ್ಸ್ ಡೆವಲಪ್‌ಮೆಂಟ್ ಸೆಂಟರ್ ನಿರ್ದೇಶಕಿ ಹಾಗೂ ಸಂಪನ್ಮೂಲ ವ್ಯಕ್ತಿ ಡಾ. ಶುಷ್ಮಾ ಎಚ್ ತಿಳಿಸಿದರು.

ತಾಲೂಕಿನ ಕಡಗಂಚಿ ಸಮೀಪದ ಸಿಯುಕೆಯ ಸಾಫ್ಟ್ ಸ್ಕಿಲ್ಸ್ ಡೆವಲಪ್‌ಮೆಂಟ್ ಸೆಂಟರ್ ವತಿಯಿಂದ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ''ರೀ-ಎಂಜಿನಿಯರಿಂಗ್ ಎಂಜಿನಿಯರ್ಸ್ ಸಾಫ್ಟ್‌ಸ್ಕಿಲ್ಸ್'' ಎಂಬ ಒಂದು ದಿನದ ಮೃದು ಕೌಶಲ್ಯಗಳ ಅಭಿವೃದ್ಧಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಎಐ ಯುಗದಲ್ಲಿ ತಂತ್ರಜ್ಞಾನ ಎಲ್ಲರಿಗೂ ಲಭ್ಯವಾಗುತ್ತಿರುವ ಸಂದರ್ಭದಲ್ಲಿ ಮೃದು ಕೌಶಲ್ಯಗಳೇ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಮುನ್ನಡೆ ನೀಡುವ ಪ್ರಮುಖ ಅಂಶವಾಗಿವೆ.

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳ ವಿದ್ಯಾರ್ಥಿಗಳಿಗೆ ಅಗತ್ಯ ಮೃದು ಕೌಶಲ್ಯಗಳಲ್ಲಿ ತರಬೇತಿ ನೀಡಲಾಗುತ್ತಿದ್ದು, ಉದ್ಯಮದ ಅಗತ್ಯತೆಗಳಿಗೆ ತಕ್ಕಂತೆ ವಿಶೇಷ ತರಬೇತಿ ನೀಡಲು ಸಂಬಂಧಿತ ಉದ್ಯಮಗಳೊಂದಿಗೆ ಒಪ್ಪಂದಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ವಿವರಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಸಿಯುಕೆಯ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಮಾತನಾಡಿ, ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ನಿರ್ಮಾಣಕ್ಕೆ ಮೃದು ಕೌಶಲ್ಯಗಳು ಅತ್ಯಗತ್ಯ. ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೇವಲ ಪದವಿ ಮಾತ್ರ ಸಾಕಾಗುವುದಿಲ್ಲ. ಆತ್ಮವಿಶ್ವಾಸ, ಸಾರ್ವಜನಿಕ ಭಾಷಣ ಹಾಗೂ ಪರಿಣಾಮಕಾರಿ ಸಂವಹನ ಕೌಶಲ್ಯಗಳು ಯಶಸ್ಸಿಗೆ ಮುಖ್ಯ ಎಂದರು.

ಎಐ ಸೇರಿದಂತೆ ತಂತ್ರಜ್ಞಾನಗಳು ಮಾತ್ರ ವೃತ್ತಿಜೀವನದಲ್ಲಿ ಮುನ್ನಡೆಯಲು ಸಾಕಾಗುವುದಿಲ್ಲ. ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯವನ್ನು ಗುರುತಿಸಿಕೊಂಡು ನಿರಂತರವಾಗಿ ಕೌಶಲ್ಯ ವೃದ್ಧಿಗೆ ಶ್ರಮಿಸಬೇಕು ಎಂದು ಕರೆ ನೀಡಿದರು.

ಐಕ್ಯೂಎಸಿ ನಿರ್ದೇಶಕ ಪ್ರೊ. ಅಮರೇಂದ್ರ ಮತ್ತು ಮಾತನಾಡಿದರು.

ಎಂಜಿನಿಯರಿಂಗ್ ನಿಕಾಯದ ಡೀನ್ ಡಾ.ಪರಮೇಶ, ಪ್ರೊ.ವೀರೇಶ ಕಸಬೇಗೌಡರ, ಡಾ.ಎಂ. ಜೋಹೈರ್, ಪ್ರೊ.ವಿಜಯಕುಮಾರ, ಪ್ಲೇಸ್ಮೆಂಟ್ ಅಧಿಕಾರಿ ಡಾ.ಪರಮೇಶ ಸೇರಿದಂತೆ ಅಧ್ಯಾಪಕರು ಮತ್ತು ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಜಿ ರಾಮ್ ಜಿ ಯೋಜನೆಯಿಂದ ಗ್ರಾಮೀಣ ಅಭಿವೃದ್ಧಿ ಸಾಧ್ಯ: ವಿಜಯೇಂದ್ರ



ಬಾಗಲಕೋಟೆ, ಫೆ.13-

ಇಲ್ಲಿನ ಈಶ್ವರಲಿಂಗ ಮೈದಾನದಲ್ಲಿ ಗುರುವಾರ ವಿಬಿ ಜಿ ರಾಣಟಿಜಜಜಿಟಿಜಜ ಜಿ ಕುರಿತು ಹಮ್ಮಿಕೊಂಡ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶೇ 40 ಲಂಚ ಪಡೆಯುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರ ಈ ಯೋಜನೆಯಲ್ಲಿ ತನ್ನ ಪಾಲಿನ ಶೇ 40 ರಷ್ಟು ಹಣವನ್ನು ನೀಡದೇ ಯೋಜನೆ ಕುರಿತು ಸುಳ್ಳು ಅಪ ಪ್ರಚಾರ ಮಾಡುತ್ತಿದೆ ಎಂದು ಕಿಡಿ ಕಾರಿದರು.

ಈ ಯೋಜನೆಯಿಂದ ಗ್ರಾಮೀಣ ಜನರಿಗೆ ವರ್ಷಕ್ಕೆ 100 ದಿನಗಳ ಬದಲು 125 ದಿನಗಳ ಕಾಲ ಕೆಲಸ ಲಭಿಸುತ್ತದೆ. ? 375 ಕೂಲಿ ದೊರೆಯಲಿದೆ. ಈ ಯೋಜನೆಯಿಂದಾಗಿ ಗ್ರಾಮೀಣ ಭಾಗದ ಜನರು ವರ್ಷಕ್ಕೆ ? 45 ಸಾವಿರಕ್ಕಿಂತ ಹೆಚ್ಚಿನ ಹಣ ಪಡೆಯಲಿದ್ದಾರೆ. ಕೇಂದ್ರ ಸರ್ಕಾರ ಈ ಯೋಜನೆಗೆ ಅಂದಾಜು ? 85 ಸಾವಿರ ಕೋಟಿ ಹಣ ವಿನಿಯೋಗ ಮಾಡಲಿದೆ. ಬಿಜೆಪಿ ಕಾರ್ಯಕರ್ತರು ಪ್ರತಿ ಗ್ರಾಮದಲ್ಲಿ 2 ಕಿ.ಮೀ ಪಾದಯಾತ್ರೆ ಕೈಗೊಂಡು ಗ್ರಾಮೀಣ ಭಾಗದಲ್ಲಿ ಈ ಯೋಜನೆ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ಸೂಚಿಸಿದರು.

ರಾಜ್ಯದ ಬಹುತೇಕ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಬೇಕಾದ ಸಮರ್ಪಕ ಔಷಧ ಪೂರೈಸುವಲ್ಲಿ ರಾಜ್ಯ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ ಎಂದು ಬಿ.ವೈ. ವಿಜಯೇಂದ್ರ ಪ್ರಜಾವಾಣಿ ಪತ್ರಿಕೆಯ ವರದಿಯನ್ನು ಉಲ್ಲೇಖಿಸಿ ಮಾತನಾಡಿದರು. ಸರ್ಕಾರಿ ಆಸ್ಪತ್ರೆಗಳಲ್ಲಿಯ ಕೇಂದ್ರ ಸರ್ಕಾರದ ಜನೌಷಧ ಕೇಂದ್ರಗಳನ್ನು ನಿಲ್ಲಿಸಿರುವುದು ಕೂಡ ಖಂಡನೀಯ ಎಂದರು.

ಶಾಸಕ ಸಿದ್ದು ಸವದಿ ಮಾತನಾಡಿ, ಕಾಂಗ್ರೆಸ್ ಪಕ್ಷ ದೇಶದಲ್ಲಿ ಅಂದಾಜು 600 ಸಂಸ್ಥೆಗಳಿಗೆ ನಕಲಿ ಗಾಂಧಿಗಳ ಹೆಸರನ್ನು ಇಟ್ಟಿದೆ. ಮಹಾತ್ಮಾ ಗಾಂಧೀಜಿಯವರ ತತ್ವಗಳನ್ನು ಪಾಲಿಸುತ್ತೇನೆ ಎಂದು ಹೇಳುವ ರಾಜ್ಯ ಸರ್ಕಾರ ಗಾಂಧೀಜಿಯವರ ತತ್ವಗಳನ್ನು ಧಿಕ್ಕರಿಸಿ ರಾಜ್ಯದಲ್ಲಿ 2,500 ಸಾವಿರ ಬಾರ್ ಗಳಿಗೆ ಪರವಾನಗಿ ನೀಡಿರುವುದು ಖಂಡನೀಯ ಎಂದರು.

ವೇದಿಕೆಯ ಮೇಲೆ ರಾಜ್ಯ ಘಟಕದ ಕಾರ್ಯದರ್ಶಿ ಶರಣು ತಳ್ಳಿಕೇರಿ, ಜಿಲ್ಲಾ ಘಟಕದ ಅಧ್ಯಕ್ಷ ಶಾಂತಗೌಡ ಪಾಟೀಲ, ನಗರ ಘಟಕದ ಅಧ್ಯಕ್ಷ ಶ್ರೀಶೈಲ ಬೀಳಗಿ, ಗ್ರಾಮೀಣ ಘಟಕದ ಅಧ್ಯಕ್ಷ ಸುರೇಶ ಅಕ್ಕಿವಾಟ, ಧರೆಪ್ಪ ಉಳ್ಳಾಗಡ್ಡಿ. ಸಂಜಯ ತೆಗ್ಗಿ, ಆನಂದ ಕಂಪು ಇದ್ದರು.

ಪುಸ್ತಕಗಳ ಮುದ್ರಿಸಲು ಕನಿಷ್ಠ ದರಪಟ್ಟಿಗೆ ಅರ್ಜಿ ಆಹ್ವಾನ

ರಾಯಚೂರು,ಫೆ.12-

ಇಲ್ಲಿನ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಿಂದ 2024-25ನೇ ಸಾಲಿನ ಜಿಲ್ಲಾ ಅಂಕಿ ಅಂಶ ನೋಟದ ಪುಸ್ತಕಗಳು ಹಾಗೂ ಆರ್ಥಿಕ ಸಾಮಾಜಿಕ ಅವಲೋಕನ ಪುಸ್ತಕಗಳ ಮುದ್ರಿಸಲು ಕನಿಷ್ಠ ದರಪಟ್ಟಿಗೆ ಅರ್ಜಿ ಆಹ್ವಾನಿಸಲಾಗಿದೆ.

ರಾಯಚೂರು ಜಿಲ್ಲೆಯ ಅಂಕಿ ಅಂಶಗಳ ನೋಟದ ಪುಸ್ತಕಗಳು ಹಾಗೂ ಆರ್ಥಿಕ ಸಾಮಾಜಿಕ ಅವಲೋಕನ ಪುಸ್ತಕಗಳ ಮುದ್ರಿಸುವ ಕರಡು ಪ್ರತಿ ತಯಾರಾಗಿದ್ದು, ಅವುಗಳನ್ನು ಯಾವುದೇ ಅಕ್ಷರದೋಷ, ವ್ಯಾಕರಣ ದೋಷಗಳು ಇರದಂತೆ ಜಿಲ್ಲೆಯ ಅಂಕಿ ಅಂಶಗಳ ನೋಟದ ಪುಸ್ತಕದ ಮುಂಭಾಗ ಮತ್ತು ಹಿಂಭಾಗದ 2 ಪುಟಗಳು ಹಾಗೂ 40 ನಕ್ಷೆಗಳ ಒಳಪುಟಗಳು ಬಣ್ಣಗಳಿಂದ ಮುದ್ರಿತವಾಗಬೇಕು ಹಾಗೂ 60 ಪುಟಗಳ ಆರ್ಥಿಕ ಸಾಮಾಜಿಕ ಅವಲೋಕನ ಪುಸ್ತಕವನ್ನು (ಮುಂಭಾಗ ಮತ್ತು ಹಿಂಭಾಗದ 2 ಬಣ್ಣದ ಪುಟಗಳು) ಅಂದವಾಗಿ ಮುದ್ರಿಸಿ ಕೊಡಬೇಕಾಗಿದೆ.

ರಾಯಚೂರು ಜಿಲ್ಲೆಯ ಅಂಕಿ ಅಂಶಗಳ ನೋಟದ ಪುಸ್ತಕದ 500 ಪುಸ್ತಕಗಳನ್ನು ಆರ್ಥಿಕ ಸಾಮಾಜಿಕ ಅವಲೋಕನ 200 ಪುಸ್ತಕಗಳನ್ನು ಮುದ್ರಣ ಮಾಡುವುದಕ್ಕಾಗಿ ದರಪಟ್ಟಿಯನ್ನು ಮೂರು ಲಕ್ಷರೂಪಾಯಿಗಳಿಗೆ ಕರೆಯಲಾಗಿದೆ. ಇಚ್ಛೆಯುಳ್ಳ ಮುದ್ರಣಾಲಯದವರು ಈ ದರಪಟ್ಟಿಗಳನ್ನು ಪ್ರಕಟವಾದ ದಿನಾಂಕದಿದ ಒಂದು ವಾರದೊಳಗಾಗಿ ಅಂದರೆ ದಿನಾಂಕ:10-02-2026 ರಿಂದ ದಿನಾಂಕ:18.02.2026 ರ ಸಂಜೆ 5.30 ಗಂಟೆಯೊಳಗಾಗಿ ಈ ಕಾರ್ಯಾಲಯಕ್ಕೆ ಪುಸ್ತಕ ಒಂದಕ್ಕೆ ತಗಲುವ ದರವನ್ನು ನಮೂದಿಸಿ ಕನಿಷ್ಠ ದರಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸತಕ್ಕದ್ದು ಮತ್ತು ಈ ಕಛೇರಿಗೆ ಸ್ವೀಕೃತಿಯಾದ ದರಪಟ್ಟಿಗಳನ್ನು ದಿನಾಂಕ: 19.02.2026 ರ ಬೆಳಿಗ್ಗೆ 11ಗಂಟೆಗೆ ಈ ಕಚೇರಿಯಲ್ಲಿ ತೆರೆಯಲಾಗುವುದು ಕಾರಣ ದರಪಟ್ಟಿಗಳನ್ನು ಸಲ್ಲಿಸಿದವರು ಈ ಪತ್ರದಲ್ಲಿ ತಿಳಿಸಿದ ವೇಳೆಯಲ್ಲಿ ಹಾಜರಾಗಬೇಕು. ಅತೀ ಕಡಿಮೆ ದರಪಟ್ಟಿ ಸಲ್ಲಿಸುವ ಮುದ್ರಣಾಕಾರರು ಕಾಂ ಆದೇಶ ನೀಡಿದ 07 ದಿವಸದೊಳಗಾಗಿ ಯಾವುದೇ ದೋಷವಿಲ್ಲದಂತೆ ಪರಿಶೀಲಿಸಿ, ಪ್ರಕಟಣೆಯಲ್ಲಿ ತಿಳಿಸಿದ ನಿಬಂಧನೆಗಳಿಗೆ ಅನುಗುಣವಾಗಿ ಪುಸ್ತಕಗಳನ್ನು ಮುದ್ರಿಸಿ ಕೊಡತಕ್ಕದ್ದು ಹಾಗೂ ಒಟ್ಟು ಬಿಲ್ಲಿನ ಮೊತ್ತದಲ್ಲಿ ಶೇ.2 ಟಿಡಿಎಸ್‌ನ್ನು ಕಟಾಯಿಸಿ ಹಣವನ್ನು ಪಾವತಿಸಲಾಗುವುದು ಎಂದು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರಕೇರಾ ದಿ.ಕೆ.ರಂಗಪ್ಪನಾಯಕ ದಳಪತಿ ವೃತ್ತ ಅನಾವರಣ




ಸಿರವಾರ,ಫೆ.13-

ಅರಕೇರಾ ಪಟ್ಟಣದ ಸಿರವಾರ ಮುಖ್ಯರಸ್ತೆಯ ತಹಸೀಲ್ ಕಚೇರಿಗೆ ಹೋಗುವ ಮಾರ್ಗದಲ್ಲಿ ದಿ.ಕೆ.ರಂಗಪ್ಪನಾಯಕ ದಳಪತಿ ಅವರ ಭಾವಚಿತ್ರವಿರುವ ನಾಮಫಲಕದ ವೃತ್ತವನ್ನು ಮುಂಡರಗಿಯ ಶಿವಣ್ಣತಾತತನವರು ಗುರುವಾರ ಅನಾವರಣಗೊಳಿಸಿದರು.

ವಿಶ್ವನಾಥಹಿರೇಮಠ.ಸಿದ್ದಯ್ಯಸ್ವಾಮಿ ಮಠಪತಿ ಬಸವರಾಜಸ್ವಾಮಿ ಮಠಪತಿ ವಿವಿಧ ದಾರ್ಮಿಕ ಕಾರ್ಯಕ್ರಮಗಳನ್ನು ನೆರವೇರಿಸಿದರು. ಪ್ರಮುಖರಾದ ಸತ್ಯನಾರಾಯಣ ನಾಯಕಪೊಲೀಸ್ ಪಾಟೀಲ್, ಶಾಮರಾವ್‌ಕುಲ್ಕರ್ಣಿ,ಕೆ. ಅನಂತರಾಜನಾಯಕ, ಎ.ರಾಜಶೇಖರ ನಾಯಕ, ಕೆ.ಭಗವಂತ್ರಾಯನಾಯಕ.ಕೆ.ನಾಗರಾಜನಾಯಕ, ಡಾ.ಎಚ್ ಎ.ನಾಡಗೌಡ, ಜಂಬಣ್ಣನೀಲಗಲ್, ಶರಣಬಸವ ಪಾಟೀಲ್ ಜೋಳದಹೆಡಗಿ ತಾಲೂಕಾ ಬಿಜೆಪಿ ಅಧ್ಯಕ್ಷರು, ಚನ್ನವೀರಯ್ಯಸ್ವಾಮಿ ಹಿರೇಮಠ, ಸೀತಣ್ಣನಾಯಕ ಗರಿಕಾರ ವೆಂಕಟೇಶನಾಯಕದೊರೆ, ಶಿವರಾಜಪೂಜಾರಿ ,ಹನುಮಂತ್ರಾಯಪೂಜಾರಿ ರಾಮೇಶ್ವರಸ್ವಾಮಿ, ಚಂದ್ರಶೇಖ ರಶೆಟ್ಟಿಶೇಖರಪ್ಪಗೌಡಮಾ. ಪಾ.ರಾಮನಗೌಡದೊರೆ, ವರದರಾಜ ನಾಯಕದೊರೆ, ಮಲ್ಲಿಕಾರ್ಜುನ ಗುಡಿ, ಶರಣಗೌಡ ಮಾ.ಪಾ. ಹನುಮಂತ ಶಾವಂತಗಲ್, ವಿರೇಶ ಗೌಡಮಾ,ಪಾ ಬಿಜೆಪಿ ಯುವ ಮುಖಂಡ ನಿಲವಂಜಿ ಅಶೋಕ್ ಜಾಗಟಗಲ್, ವಿರುಪಾಕ್ಷಿ ದೊರೆ, ಕಾಶ್ಮಯ, ಮೂಖಪ್ಪ ನಾಯಕ್, ವೆಂಕಟೇಶ್ ಭಜಂತ್ರಿ, ಅರಕೇರಿ ಶರಣಪ್ಪನಾಯಕ ಬುದ್ದಿನ್ನಿ ಜಾವೀಥ್ ಆರ್ ಚಿಂಚೋಳಿಕರ್ ಮೋನಪ್ಪನಾಯಕ ಕ್ಯಾದಿಗ್ಗೇರಾ,ದುರಗನಗೌಡ ಆಕಳಕುಂಪಿ, ಬಸವರಾಮುಲು ಸೇರಿದಂತೆ ಅಭಿಮಾನಿಗಳು ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಅತೀ ಮುಖ್ಯ : ಡಿಸಿ ಶಿಲ್ಪಾ ಶರ್ಮಾ



ಬೀದರ್, ಫೆ.13--

ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮುಖ್ಯವಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಹೇಳಿದರು.

ನಗರದ ಶಾಹಿನ್ ಪದವಿಪೂರ್ವ ಕಾಲೇಜು ಸಭಾಂಗಣದಲ್ಲಿ ಗುರುವಾರ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿ ವತಿಯಿಂದ 2025-26ನೇ ಸಾಲಿನ ಎಸೆಸೆಲ್ಸಿ ಫಲಿತಾಂಶ ಉತ್ತಮಪಡಿಸಲು ಆಯೋಜಿಸಿದ್ದ ಪ್ರೌಢಶಾಲಾ ಮುಖ್ಯ ಶಿಕ್ಷಕರ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಎಸೆಸೆಲ್ಸಿ ಪೂರ್ವಸಿದ್ಧತಾ ಪರೀಕ್ಷೆ 1 ಮತ್ತು 2ರಲ್ಲಿ ಶೇ.0ರಿಂದ ಶೇ.50ರೊಳಗಿನ ಫಲಿತಾಂಶ ಬಂದಿರುವ ಶಾಲೆಗಳಲ್ಲಿ ಬೆಳಿಗ್ಗೆ ಹಾಗೂ ಸಂಜೆ ವಿಶೇಷ ತರಗತಿಗಳನ್ನು ನಡೆಸಿ ಮೂರನೇ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ತರುವಂತೆ ಶಿಕ್ಷಕರು ಕ್ರಮವಹಿಸಬೇಕು ಎಂದು ಸೂಚಿಸಿದರು. ಜಿಲ್ಲೆಯಲ್ಲಿ ಶೇ.0 ಫಲಿತಾಂಶ ಬಂದಿರುವ ಶಾಲೆಗಳ ಶಿಕ್ಷಕರನ್ನು ಹೊಣೆಗಾರರನ್ನಾಗಿ ಮಾಡಿ, ಅಗತ್ಯವಿದ್ದರೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು.

ಫಲಿತಾಂಶ ಸುಧಾರಣೆಗಾಗಿ ಈಗಾಗಲೇ ಕೆಕೆಆರ್‌ಡಿಬಿ ವತಿಯಿಂದ ಪ್ರತಿ ತಾಲೂಕಿಗೆ 25 ಲಕ್ಷ ರೂ. ವೆಚ್ಚದಲ್ಲಿ ವಿಷಯವಾರು ಅತಿಥಿ ಶಿಕ್ಷಕರನ್ನು ನೇಮಿಸಿ ವಿಶೇಷ ಬೋಧನೆಗೆ ಕ್ರಮ ಕೈಗೊಳ್ಳಲಾಗಿದೆ. ಅನೇಕ ಕಾರ್ಯಾಗಾರಗಳನ್ನು ಆಯೋಜಿಸಿ ಶಿಕ್ಷಕರಿಗೆ ಮಾರ್ಗದರ್ಶನ ನೀಡಿದರೂ ನಿರೀಕ್ಷಿತ ಫಲಿತಾಂಶ ಸಿಗುತ್ತಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಗಿರೀಶ್ ಬದೋಲೆ ಮಾತನಾಡಿ, ಎಸೆಸೆಲ್ಸಿ ಫಲಿತಾಂಶ ಸುಧಾರಣೆಗೆ 29 ಅಂಶಗಳ ಕಾರ್ಯಕ್ರಮ ರೂಪಿಸಲಾಗಿದೆ. ಹಿಂದುಳಿದ ವಿದ್ಯಾರ್ಥಿಗಳನ್ನು ಗುರುತಿಸಿ ಗುಂಪು ಚಟುವಟಿಕೆ, ಸ್ಪರ್ಧೆಗಳು ಹಾಗೂ ಪೋಷಕರ ಸಭೆಗಳನ್ನು ನಡೆಸಲಾಗುತ್ತಿದೆ. ಆದರೂ ಜಿಲ್ಲೆ 35 ಶೈಕ್ಷಣಿಕ ಜಿಲ್ಲೆಗಳ ಪೈಕಿ 34ನೇ ಸ್ಥಾನದಲ್ಲಿರುವುದು ಆತಂಕಕಾರಿ ಎಂದು ಹೇಳಿದರು.

ಖಾಸಗಿ ಶಾಲೆಗಳಲ್ಲಿ ಉತ್ತಮ ಫಲಿತಾಂಶ ಬರುತ್ತಿರುವುದಾದರೆ ಸರ್ಕಾರಿ ಶಾಲೆಗಳಲ್ಲಿ ಏಕೆ ಸಾಧ್ಯವಾಗುತ್ತಿಲ್ಲ ಎಂಬುದನ್ನು ಬಿಇಓ ಮತ್ತು ಬಿಆರ್‌ಸಿ ಅಧಿಕಾರಿಗಳು ಗಂಭೀರವಾಗಿ ಪರಿಶೀಲಿಸಬೇಕು. ಉತ್ತಮ ಫಲಿತಾಂಶ ತರುವ ಶಾಲಾ ಶಿಕ್ಷಕರಿಗೆ ಜಿಲ್ಲಾಡಳಿತದಿಂದ ಸನ್ಮಾನ ನೀಡಲಾಗುವುದು ಎಂದು ತಿಳಿಸಿದರು.

ಮಹಾನಗರ ಪಾಲಿಕೆ ಆಯುಕ್ತ ಮುಕುಲ್ ಜೈನ್ ಮಾತನಾಡಿ, ವಿದ್ಯಾರ್ಥಿಗಳು ಯಾವ ವಿಷಯಗಳಲ್ಲಿ ಹಿಂದುಳಿದಿದ್ದಾರೆ ಎಂಬುದನ್ನು ಗುರುತಿಸಿ ಅವರಿಗೆ ವಿಶೇಷ ಬೋಧನೆ ನೀಡುವಂತೆ ಶಿಕ್ಷಕರಿಗೆ ಸಲಹೆ ನೀಡಿದರು.

ಕಾರ್ಯಾಗಾರದಲ್ಲಿ ಪ್ರೊಬೇಷನರಿ ಐಎಎಸ್ ಅಧಿಕಾರಿ ರಮ್ಯಾ ರಂಗನಾಥ್, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಸುರೇಶ್, ಡಯಟ್ ಪ್ರಾಚಾರ್ಯರು, ಕಾರ್ಯಕ್ರಮ ಸಂಯೋಜಕ ಸೈಯದ್ ಫುರ್ಖಾನ್, ಶಾಹೀನ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಅಬ್ದುಲ್ ಹಜೀಜ್ ಸೇರಿದಂತೆ ವಿವಿಧ ಅಧಿಕಾರಿಗಳು, ಎಲ್ಲಾ ತಾಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸರ್ಕಾರಿ ಮತ್ತು ಅನುದಾನ ರಹಿತ ಶಾಲೆಗಳ ಮುಖ್ಯ ಶಿಕ್ಷಕರು ಉಪಸ್ಥಿತರಿದ್ದರು.

ಔರಾದ್: ಜಾನಪದ ಕಲಾ ವೈಭವ, ಆಕರ್ಷಕ ಮೆರವಣಿಗೆ

ಔರಾದ್,ಫೆ.13-

ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ ಕಲಾ ತಂಡಗಳು ತಮ್ಮ ವೈಶಿಷ್ಟ್ಯಪೂರ್ಣ ಪ್ರದರ್ಶನಗಳ ಮೂಲಕ ಪ್ರೇಕ್ಷಕರ ಮನಸೆಳೆದವು. ಜಾತ್ರೆಯ ಪ್ರಮುಖ ಭಾಗವಾದ ಮೆರವಣಿಗೆಯಲ್ಲಿ ಕೋಲಾಟ, ತಮಟೆ ವಾದನ, ಬಂಜಾರಾ ಸಂಗೀತ, ಬಂಜಾರಾ ನೃತ್ಯ, ಕೀರ್ತನೆ, ಭಜನೆ, ಜಾನಪದ ಸಂಗೀತ, ಗೀಗಿಪದ, ಶಿವ ಭಜನೆ ಸೇರಿದಂತೆ ಅನೇಕ ಜಾನಪದ ಕಲಾ ರೂಪಗಳು ಅದ್ದೂರಿಯಾಗಿ ಪ್ರದರ್ಶನಗೊಂಡವು. ಉದ್ಘಾಟನೆ: ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಪ್ರಭು ಚವಾಣ್, ಮಾತಾ ಜಗದಂಬಾ ಜಾತ್ರೆಯಲ್ಲಿ ಎಲ್ಲರನ್ನು ಒಗ್ಗೂಡಿಸುವುದರ ಜೊತೆಗೆ ಜಾನಪದ ಕಲೆ ಉಳಿಸಿ ಬೆಳೆಸುವ ಕೆಲಸ ನಡೆದಿದೆ. ಇಂದು ಗ್ರಾಮೀಣ ಕಲಾವಿದರನ್ನು ಗೌರವಿಸಿ ಪ್ರೋತ್ಸಾಹಿಸಲಾಗುತ್ತಿದೆ. ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಮಾಸಾಶನ ಪಡೆಯುವ ಕಲಾವಿದರು ಔರಾದನಲ್ಲಿದ್ದಾರೆ ಎಂದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಬಾಂಗ್ಲಾ ಚುನಾವಣೆ : ಭಾರತದ ನಿಲುವು ಎಷ್ಟು ಸರಿ?



ರಾಜಕೀಯ ಅಸ್ಥಿರತೆ, ಜೆನ್-ಝಿ ಪ್ರತಿಭಟನೆ, ಪ್ರಧಾನಿಯ ರಾಜೀನಾಮೆ, ಮಾಜಿ ಪ್ರಧಾನಿಗೆ ಮರಣದಂಡನೆ ಶಿಕ್ಷೆ, ಆಂತರಿಕ ಕಚ್ಚಾಟ, ಹಿಂದೂ ಯುವಕರ ಹತ್ಯೆ ಹೀಗೆ ಸಾಲು ಸಾಲು ಘಟನೆಗಳಿಗೆ ಸಾಕ್ಷಿಯಾಗಿದ್ದು ಬಾಂಗ್ಲಾದೇಶ.

ಕಳೆದ ಒಂದೂವರೆ ವರ್ಷಗಳಿಂದ ಬಾಂಗ್ಲಾದೇಶದ ಪರಿಸ್ಥಿತಿ ಉದ್ವಿಗ್ನವಾಗಿತ್ತು. 2024ರ ಆಗಸ್ಟ್ ತಿಂಗಳಿನಲ್ಲಿ ನಡೆದ ವಿದ್ಯಾರ್ಥಿ ಪ್ರತಿಭಟನೆ ಮತ್ತು ಹಿಂಸಾಚಾರದ ಹಿನ್ನೆಲೆಯಲ್ಲಿ ಪ್ರಧಾನಿ ಶೇಖ್ ಹಸೀನಾ ರಾಜೀನಾಮೆ ನೀಡಿ ಭಾರತಕ್ಕೆ ಪಲಾಯನ ಮಾಡಬೇಕಾಯಿತು. ಇದರಿಂದ 15 ವರ್ಷಗಳ ದೀರ್ಘ ಆಡಳಿತ ಕೊನೆಗೊಂಡಿತು. ಇವರ ರಾಜೀನಾಮೆಯ ನಂತರ ನೊಬೆಲ್ ಪ್ರಶಸ್ತಿ ಪುರಸ್ಕೃತ ಮೊಹಮ್ಮದ್ ಯೂನಸ್ ಮಧ್ಯಂತರ ಸರ್ಕಾರವನ್ನು ರಚಿಸಿ ರಾಷ್ಟ್ರವನ್ನು ಮುನ್ನಡೆಸಿದರು.

2024ರ ಹಿಂಸಾಚಾರದ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆಗೆ ಆದೇಶ ನೀಡಿದ್ದ ಬಾಂಗ್ಲಾದೇಶ ಅಂತಾರಾಷ್ಟ್ರೀಯ ನ್ಯಾಯಾಲಯ ''ಮಾನವೀಯತೆ ವಿರುದ್ಧ ನಡೆಸಿರುವ ಹಿಂಸಾಚಾರ'' ಎಂದು ಪರಿಗಣಿಸಿ ಶೇಖ್ ಹಸೀನಾ ಅವರಿಗೆ ಮರಣದಂಡನೆ ಶಿಕ್ಷೆಯನ್ನು ವಿಧಿಸಿತು.

ಇಷ್ಟೆಲ್ಲ ಘಟನೆಗಳಿಗೆ ಸಾಕ್ಷಿಯಾಗಿರುವ ಬಾಂಗ್ಲಾದೇಶವು ಈಗ ಮತ್ತೆ ಚುನಾವಣೆಯನ್ನು ಎದುರಿಸಿದೆ. ಇದೇ ಫೆ.12 ರಂದು ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಮಾಜಿ ಪ್ರಧಾನಿ ಖಲೀದಾ ಜಿಯಾ ಅವರ ಪುತ್ರ ತಾರಿಕ್ ರೆಹಮಾನ್ ನೇತೃತ್ವದ ಬಾಂಗ್ಲಾದೇಶ ರಾಷ್ಟ್ರೀಯತಾವಾದಿ ಪಕ್ಷ (ಬಿಎನ್‌ಪಿ) ಭರ್ಜರಿ ಗೆಲುವು ಸಾಧಿಸಿದೆ.

ಮಾಜಿ ಪ್ರಧಾನಿ ಶೇಖ್ ಹಸೀನಾ ಕೆಳಗಿಳಿದ ನಂತರ ನಡೆಯುತ್ತಿರುವ ಮೊದಲ ಚುನಾವಣೆ ಇದಾಗಿದೆ. ಒಟ್ಟು 300 ಸದಸ್ಯರ ಬಲದ ಬಾಂಗ್ಲಾ ಸಂಸತ್ತಿನಲ್ಲಿ ಬಿಎನ್‌ಪಿ 213 ಸ್ಥಾನಗಳನ್ನು ಪಡೆದು ಸ್ಪಷ್ಟ ಬಹುಮತ ಪಡೆದಿದೆ. ಈ ಬಾರಿಯ ಚುನಾವಣೆಯಲ್ಲಿ ಬಿಎನ್‌ಪಿ ಮತ್ತು ಜಮಾತ್-ಎ-ಇಸ್ಲಾಮಿ ನಡುವೆ ಪೈಪೋಟಿ ಏರ್ಪಟ್ಟಿತ್ತು. ಆದರೆ ಶೇಖ್ ಹಸೀನಾ ಅವರ ಅವಾಮಿ ಲೀಗ್ ಪಕ್ಷಕ್ಕೆ ಸ್ಪರ್ಧಿಸಲು ಅವಕಾಶ ಕೊಟ್ಟಿಲ್ಲ.

ಬಿಎನ್‌ಪಿ ಪಕ್ಷ ಮಾಜಿ ಪ್ರಧಾನಿ ಖಲೀದಾ ಜಿಯಾ ಅವರ ಪುತ್ರ ತಾರಿಕ್ ರೆಹಮಾನ್ ಅವರು ಪ್ರಧಾನಿ ಅಭ್ಯರ್ಥಿ ಎಂದು ಮೊದಲೇ ಘೋಷಿಸಿತ್ತು. ಅದರಂತೆ ಸ್ಪಷ್ಟ ಬಹುಮತ ಪಡೆದ ಬಿಎನ್‌ಪಿ ಪಕ್ಷ ತಾರಿಕ್ ರೆಹಮಾನ್ ಅವರನ್ನು ಪ್ರಧಾನಿ ಮಾಡಲಿದೆ. ಸುಮಾರು 17ಕ್ಕೂ ಹೆಚ್ಚು ವರ್ಷಗಳ ಕಾಲ ದೇಶದಲ್ಲೇ ಇರದೆ, ವಿದೇಶದಲ್ಲಿದ್ದ ತಾರಿಕ್ ರೆಹಮಾನ್ ಅವರಿಗೆ ಪ್ರಧಾನಿಯಾಗುವ ಅವಕಾಶ ಒಲಿದು ಬಂದಿದೆ.

ತಾರಿಕ್ ರೆಹಮಾನ್ ಕಳೆದ 17 ವರ್ಷಗಳಿಂದ ಲಂಡನ್‌ನಲ್ಲಿ ವಾಸವಿದ್ದರು. ಎರಡು ತಿಂಗಳ ಹಿಂದೆ ಚುನಾವಣೆಗಾಗಿ ಸ್ವದೇಶಕ್ಕೆ ಬಂದಿದ್ದರು. ಅಲ್ಲಿನ ಬಹುದೊಡ್ಡ ಪಕ್ಷ ಬಿಎನ್‌ಪಿಯ ನೇತೃತ್ವವನ್ನು ವಹಿಸಿಕೊಂಡಿದ್ದರು.

ಒಟ್ಟು 50 ಪಕ್ಷಗಳಿಂದ 1,755 ಅಭ್ಯರ್ಥಿಗಳು ಮತ್ತು 273 ಪಕ್ಷೇತರ ಅಭ್ಯರ್ಥಿಗಳು ಕಣದಲ್ಲಿದ್ದರು. ಬಿಎನ್‌ಪಿ ಪಕ್ಷವೇ ಅತಿಹೆಚ್ಚು ಅಂದರೆ 291 ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿತ್ತು. ಮುಕ್ತ, ನ್ಯಾಯಯುತ ಮತ್ತು ನಿಷ್ಪಕ್ಷಪಾತ ಚುನಾವಣೆಯನ್ನು ನಡೆಸಲು ದೇಶದಾದ್ಯಂತ ಸುಮಾರು 9 ಲಕ್ಷಕ್ಕೂ ಹೆಚ್ಚು ಭದ್ರತಾ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿತ್ತು. ಸೂಕ್ಷ್ಮ ಮತದಾನ ಕೇಂದ್ರಗಳಲ್ಲಿ ಶೇ.90 ರಷ್ಟು ಸಿ.ಸಿ.ಟಿ.ವಿ ಕ್ಯಾಮೆರಾ ಇರಿಸಲಾಗಿತ್ತು ಎಂದು ಚುನಾವಣಾ ಆಯುಕ್ತ ಅಬ್ದುಲ್ ಫಝುಲ್ ಮೊಹಮ್ಮದ್ ಸನಾವುಲ್ಲಾ ತಿಳಿಸಿದ್ದರು.

ಯಾರು ಈ ತಾರಿಕ್ ರೆಹಮಾನ್?

ಮಾಜಿ ಪ್ರಧಾನಿ ಖಲೀದಾ ಜಿಯಾ ಮತ್ತು ಬಿಎನ್‌ಪಿ ಪಕ್ಷದ ಸಂಸ್ಥಾಪಕ ಅಧ್ಯಕ್ಷ ಜಿಯಾವುರ್ ರೆಹಮಾನ್ ದಂಪತಿಯ ಪುತ್ರ ತಾರಿಕ್ ರೆಹಮಾನ್. 1965ರ ನವೆಂಬರ್ 20ರಂದು ಢಾಕಾದಲ್ಲಿ ಜನಿಸಿದ ಇವರು, ಢಾಕಾ ವಿಶ್ವವಿದ್ಯಾಲಯದಲ್ಲಿ ಅಂತರರಾಷ್ಟ್ರೀಯ ಸಂಬಂಧಗಳ ಅಧ್ಯಯನದ ವಿಷಯದಲ್ಲಿ ಪದವಿ ಪಡೆದಿದ್ದಾರೆ. ಉನ್ನತ ಶಿಕ್ಷಣದ ನಂತರ ತಂದೆ ತಾಯಿಯಂತೆ ರಾಜಕೀಯ ಪ್ರವೇಶ ಮಾಡದೆ, ಸ್ವಉದ್ಯೋಗದ ದಾರಿ ಹಿಡಿಯುತ್ತಾರೆ. ಅದರಂತೆ ಜವಳಿ ಮತ್ತು ಕೃಷಿ ಉತ್ಪನ್ನಗಳ ಉದ್ಯಮವನ್ನು ಪ್ರಾರಂಭಿಸುತ್ತಾರೆ.

ಬಾಂಗ್ಲಾದೇಶದ ಮೊದಲ ಮಹಿಳಾ ಪ್ರಧಾನಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ ಖಲೀದಾ ಜಿಯಾ 2001-2006ರ ಅವಧಿಯಲ್ಲಿ ಪ್ರಧಾನಿಯಾಗಿದ್ದ ವೇಳೆ ಭ್ರಷ್ಟಾಚಾರ ನಡೆಸಿದ್ದಾರೆ ಎಂದು ಆರೋಪಿಸಿ, ಬಾಂಗ್ಲಾದೇಶದ ಮಿಲಿಟರಿ ಸರ್ಕಾರವು ಅವರನ್ನು ಬಂಧನ ಮಾಡಿತ್ತು. 2008ರಲ್ಲಿ ಬಿಡುಗಡೆಯಾದ ಅವರು, ವೈದ್ಯಕೀಯ ಚಿಕಿತ್ಸೆ ನೆಪವೊಡ್ಡಿ ಬಾಂಗ್ಲಾದೇಶ ತೊರೆದು ಲಂಡನ್‌ಗೆ ತೆರಳಿದ್ದರು. ಇವರು ಜೊತೆ ಮಗ ತಾರಿಕ್ ರೆಹಮಾನ್ ಸಹ ಲಂಡನ್‌ಗೆ ಹೋಗಿದ್ದರು.

ಹಿಂದಿನ ಪ್ರಧಾನಿ ಶೇಖ್ ಹಸೀನಾ, ತಮ್ಮ ಆಡಳಿತದ ಸಂದರ್ಭದಲ್ಲಿ ತಾರಿಕ್ ಭ್ರಷ್ಟಾಚಾರ ಪ್ರಕರಣಗಳ ಕೇಂದ್ರ ಬಿಂದುವಾಗಿದ್ದರು. ಶೇಖ್ ಹಸೀನಾ ಸಿಕ್ಕಸಿಕ್ಕ ವೇದಿಕೆಗಳ ಮೇಲೆ ತಾರಿಕ್ ಅವರನ್ನು ಗುರಿಯಾಗಿಸಿ ಮಾತನಾಡುತ್ತಿದ್ದರು. 2004ರಲ್ಲಿ ನಡೆದ ಗ್ರೆನೇಡ್ ದಾಳಿಯಲ್ಲಿ ಅನೇಕರ ಸಾವು ನೋವುಗಳಿಗೆ ತಾರಿಕ್ ಕಾರಣರಾಗಿದ್ದರು ಎಂದು 2018ರ ರಾಜಕೀಯ ರ್‍ಯಾಲಿಯೊಂದರಲ್ಲಿ ಹಸೀನಾ ಆರೋಪ ಮಾಡಿದ್ದರು. ಇದಕ್ಕೆ ಪ್ರತಿಕ್ರಿಸಿದ ತಾರಿಕ್ ರೆಹಮಾನ್, ಇದೊಂದು ರಾಜಕೀಯ ಪ್ರೇರಿತ ಎಂದು ತಿರುಗೇಟು ಕೊಟ್ಟಿದ್ದರು.

ಬಾಲ್ಯದ ದಿನದಿಂದಲೂ ಬಾಂಗ್ಲಾದೇಶದ ರಾಜಕಾರಣವನ್ನು ನೋಡುತ್ತ ಬೆಳೆದ ತಾರಿಕ್ ಅವರಿಗೆ ಈಗ ಪ್ರಧಾನಿ ಆಗುವ ಅವಕಾಶ ಒಲಿದು ಬಂದಿರುವುದು ಆಶ್ಚರ್ಯವೇನಲ್ಲ. ಹೇಗಾದರೂ ಮಾಡಿ ಬಿಎನ್‌ಪಿ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎಂಬ ಆಶಯದಿಂದಲೇ ಸ್ವದೇಶಕ್ಕೆ ತಾರಿಕ್ ಮರಳಿ ಬಂದಿದ್ದಾರೆ ಎಂಬ ಮಾತುಗಳೂ ಕೇಳಿ ಬಂದಿದ್ದವು.

ಬಾಂಗ್ಲಾದೇಶದಲ್ಲಿನ ದೊಡ್ಡ ಪಕ್ಷವೆಂದರೆ ಬಿಎನ್‌ಪಿ ಮತ್ತು ಅವಾಮಿ ಲೀಗ್. 2024ರ ಆಗಸ್ಟ್‌ನಲ್ಲಿ ಬಿಎನ್‌ಪಿ ಶತ್ರು ಪಕ್ಷವಾದ ಶೇಖ್ ಹಸೀನಾ ನೇತೃತ್ವದ ಅವಾಮಿ ಲೀಗ್ ಸರ್ಕಾರದಲ್ಲಿ ಅತಿ ಹೆಚ್ಚು ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿ ಯುವಕರು ದಂಗೆ ಏಳುತ್ತಾರೆ. ಆ ಸಂದರ್ಭದಲ್ಲಿ ದಂಗೆ ಎದ್ದ ಯುವಕರಿಗೆ ಬಿಎನ್‌ಪಿ ಪಕ್ಷದ ನಾಯಕರು ಬೆಂಬಲಿಸುತ್ತಾರೆ. ಶೇಖ್ ಹಸೀನಾ ಪೊಲೀಸರನ್ನು ಬಳಸಿ ಪ್ರತಿಭಟನಕಾರರ ಮೇಲೆ ಗುಂಡುಗಳನ್ನು ಹಾರಿಸಲು ಆದೇಶ ಹೊರಡಿಸುತ್ತಾರೆ. ಪ್ರತಿಭಟನಕಾರರಿಗೆ ಬಿಎನ್‌ಪಿ ರಾಜಕೀಯ ಬೆಂಬಲ ಸಿಗುತ್ತಿದ್ದಂತೆ ಪ್ರತಿಭಟನೆಗಳು ಹಿಂಸಾಚಾರಕ್ಕೆ ತಿರುಗುತ್ತದೆ. ಇದಾದ ಬಳಿಕ ಸರ್ಕಾರ ಪತನಗೊಂಡು, ಮಧ್ಯಂತರ ಸರ್ಕಾರ ರಚನೆಯಾಗುತ್ತದೆ.

ಇವೆಲ್ಲ ಪ್ರತಿಭಟನೆಗಳಿಗೆ ತಾರಿಕ್ ರೆಹಮಾನ್ ಅವರ ಬಿಎನ್‌ಪಿ ಪಕ್ಷ ಪ್ರತ್ಯೇಕ್ಷ ಮತ್ತು ಪರೋಕ್ಷವಾಗಿ ಬೆಂಬಲಿಸಿದೆ ಎಂದು ಹಲವು ವರದಿಗಳು ಹೇಳಿವೆ. ಈಗ ಮಧ್ಯಂತರ ಸರ್ಕಾರವನ್ನು ಹೊಡೆದುರುಳಿಸಬೇಕು ಎಂದು ಪಣತೊಟ್ಟ ಬಿಎನ್‌ಪಿ ತಾರಿಕ್ ನೇತೃತ್ವದಲ್ಲಿ ಚುನಾವಣೆಯನ್ನು ಎದುರಿಸಿ ಸ್ಪಷ್ಟಬಹುಮತವನ್ನು ಪಡೆದಿದೆ

ತಾರಿಕ್ ರೆಹಮಾನ್ ಮೊದಲೆಲ್ಲ ಅಬ್ಬರದ ಭಾಷಣೆಗಳಿಗೆ ಹೆಚ್ಚು ಖ್ಯಾತಿ ಹೊಂದಿದ್ದರು. ಆದರೆ ಕಳೆದ ಎರಡು ತಿಂಗಳ ಹಿಂದೆ ಸ್ವದೇಶಕ್ಕೆ ಮರಳಿದ ಮೇಲೆ ಉದ್ವೇಗಕ್ಕೆ ಒಳಗಾಗಿ ಪ್ರಚೋದನಕಾರಿ ಭಾಷಣ ಮಾಡದೆ, ಶಾಂತಿಯುತ ಭಾಷಣಗಳನ್ನು ಮಾಡಿ ಜನರನ್ನು ಸೆಳೆಯಲು ಪ್ರಯತ್ನಿಸಿದ್ದಾರೆ. ಪ್ರಮುಖವಾಗಿ ಭಾಷಣದಲ್ಲಿ ಸೇಡು ಯಾರಿಗೆ ಏನು ತಂದುಕೊಡುತ್ತದೆ? ಸೇಡಿನ ರಾಜಕಾರಣವನ್ನು ಬಿಟ್ಟು ಶಾಂತಿ ಮತ್ತು ಸ್ಥಿರತೆಯ ಬಗ್ಗೆ ಮಾತನಾಡಬೇಕು. ಸೇಡು ಯಾರಿಗೂ ಒಳಿತನ್ನು ಮಾಡುವುದಿಲ್ಲ ಎಂದು ಹೇಳಿರುವುದು ಹೆಚ್ಚು ವೈರಲ್ ಆಗಿತ್ತು.

ಪ್ರಧಾನಿ ಮೋದಿ ಬೆಂಬಲ

ಆಗಸ್ಟ್ 2024ರಲ್ಲಿ ಅವಾಮಿ ಲೀಗ್ ಸರ್ಕಾರ ಪತನಗೊಂಡ ನಂತರ ನಡೆದ ಚುನಾವಣೆಯಲ್ಲಿ ಬಿಎನ್‌ಪಿ ಪಕ್ಷ ಭರ್ಜರಿ ಬಹುಮತ ಪಡೆದಿರುವ ಬಗ್ಗೆ, ಭಾರತದ ಪ್ರಧಾನಿ ನರೇಂದ್ರ ಮೋದಿ ಅಭಿನಂದನೆ ಸಲ್ಲಿಸಿದ್ದಾರೆ.

ಸಾಮಾಜಿಕ ಜಾಲತಾಣವಾದ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ಮೋದಿ ''ಬಾಂಗ್ಲಾದೇಶದ ಸಾರ್ವತ್ರಿಕ ಚುನಾವಣೆಯಲ್ಲಿ ಬಿಎನ್‌ಪಿ ಪಕ್ಷವನ್ನು ಬಹುಮತದತ್ತ ಕೊಂಡೊಯ್ದ ತಾರಿಕ್ ರೆಹಮಾನ್ ಅವರಿಗೆ ನಮ್ಮ ಹೃದಯಪೂರ್ವಕ ಅಭಿನಂದನೆಗಳು. ಈ ಗೆಲುವು ತಾರಿಕ್ ಅವರ ನಾಯಕತ್ವದ ಮೇಲೆ ಇಟ್ಟಿರುವ ನಂಬಿಕೆಯನ್ನು ತೋರಿಸುತ್ತದೆ. ಪ್ರಜಾಪ್ರಭುತ್ವ, ಪ್ರಗತಿಪರ ಮತ್ತು ಎಲ್ಲರನ್ನೂ ಒಳಗೊಂಡ ಬಾಂಗ್ಲಾದೇಶವನ್ನು ಬೆಂಬಲಿಸುವುದನ್ನು ಭಾರತ ಬೆಂಬಲಿಸುತ್ತದೆ. ನಮ್ಮ ಬಹುಮುಖ ಸಂಬಂಧಗಳನ್ನು ಬಲಪಡಿಸಲು ಹಾಗೂ ಅಭಿವೃದ್ಧಿಯ ಗುರಿಗಳನ್ನು ತಲುಪುವ ಉದ್ದೇಶದಿಂದ ನಿಮ್ಮೊಂದಿಗೆ ಕೆಲಸ ಮಾಡಲು ಎದುರು ನೋಡುತ್ತಿದ್ದೇನೆ'' ಎಂದಿದ್ದಾರೆ.

ಪ್ರಧಾನಿ ಶೇಖ್ ಹಸೀನಾ ಅವರನ್ನು ಬಾಂಗ್ಲಾ ಪ್ರತಿಭಟನಕಾರರು ಅಧಿಕಾರಿದಿಂದ ಕೆಳಗಿಳಿಸದ ತಕ್ಷಣ ಅವರು ಭಾರತಕ್ಕೆ ಪಲಾಯನ ಮಾಡಿದ್ದರು. ಭಾರತವು ಅವರಿಗೆ ರಕ್ಷಣೆಯನ್ನು ಕೊಟ್ಟಿತ್ತು. ಬಾಂಗ್ಲಾದೇಶದ ಅಂತಾರಾಷ್ಟ್ರೀಯ ನ್ಯಾಯಾಲಯ ಮರದಂಡನೆ ಶಿಕ್ಷೆ ವಿಧಿಸಿದ ನಂತರವೂ ಬಾಂಗ್ಲಾದೇಶಕ್ಕೆ ಶೇಖ್ ಹಸೀನಾ ಅವರನ್ನು ಮರಳಿ ಕಳುಹಿಸಿ ಕೊಡುವ ಬಗ್ಗೆ ಭಾರತ ಮೌನವಹಿಸಿತ್ತು. ಈಗಲೂ ಶೇಖ್ ಹಸೀನಾ ಅವರು ಭಾರತದಲ್ಲಿ ಆಶ್ರಯ ಪಡೆಯುತ್ತಿದ್ದಾರೆ.

ಬಾಂಗ್ಲಾದಲ್ಲಿ ಹಸೀನಾ ಅವರ ಅವಾಮಿ ಲೀಗ್‌ನ ಖಟ್ಟರ್ ರಾಜಕೀಯ ವಿರೋಧಿಯಾಗಿರುವ ಬಿಎನ್‌ಪಿ ಗೆಲುವನ್ನು ಭಾರತ ಸ್ವೀಕರಿಸಿರುವ ಬಗ್ಗೆ ಗೊಂದಲ ಉಂಟಾಗಿದೆ. ಒಂದು ಕಡೆ ಶೇಖ್ ಹಸೀನಾ ಅವರಿಗೆ ಭಾರತದಲ್ಲಿ ಆಶ್ರಯ, ಮತ್ತೊಂದು ಕಡೆ ಬಿಎನ್‌ಪಿ ಜೊತೆ ಕೆಲಸ ಮಾಡುವ ಉತ್ಸು ಕತೆ. ಭಾರತದ ನಿರ್ಧಾರದ ಬಗ್ಗೆ ಗೊಂದಲದ ಜೊತೆಗೆ ಅನುಮಾನ ಹುಟ್ಟುಹಾಕುತ್ತದೆ.

ತಮಿಳುನಾಡಿನಲ್ಲಿ ಕಾರ್ಲ್ ಮಾರ್ಕ್ಸ್ ಪ್ರತಿಮೆ ನಿರ್ಮಾಣಕ್ಕೆ ವಿರೋಧ ಸಮಂಜಸವೇ?

ಫೆಬ್ರವರಿ 6ರಂದು ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಚೆನ್ನೈನ ಎಗ್ಮೋರ್‌ನಲ್ಲಿರುವ ಕನ್ನಿಮೆರಾ ಸಾರ್ವಜನಿಕ ಗ್ರಂಥಾಲಯ ( ) ಸಂಕೀರ್ಣದಲ್ಲಿ ಜರ್ಮನ್ ತತ್ವಜ್ಞಾನಿ, ರಾಜಕೀಯ ಸಿದ್ಧಾಂತಿ, ಅರ್ಥಶಾಸ್ತ್ರಜ್ಞ ಕಾರ್ಲ್ ಮಾರ್ಕ್ಸ್ ಅವರ ಪ್ರತಿಮೆಯನ್ನು ಅನಾವರಣಗೊಳಿಸಿದ್ದಾರೆ. ಕಾರ್ಲ್ ಮಾರ್ಕ್ಸ್ ಪ್ರತಿಮೆ ಅನಾವರಣಕ್ಕೆ ಬಿಜೆಪಿ ತೀವ್ರ ವಿರೋಧ ವ್ಯಕ್ತಪಡಿಸುತ್ತಿದೆ. ಈ ನಡುವೆ ಚೆನ್ನೈನಲ್ಲೇ ಕಾರ್ಲ್ ಮಾರ್ಕ್ಸ್ ಪ್ರತಿಮೆ ನಿರ್ಮಾಣ ಮಾಡಿದ್ದೇಕೆ ಎಂಬ ಪ್ರಶ್ನೆಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ತಮಿಳುನಾಡಿನ ಬಗ್ಗೆ ಮಾರ್ಕ್ಸ್ ಬರವಣಿಗೆಗಳನ್ನು ಮತ್ತೆ ಮೆಲುಕು ಹಾಕುವಂತಾಗಿದೆ.

ಬಿಜೆಪಿ ನಾಯಕಿ ತಮಿಳಿಸೈ ಸೌಂದರರಾಜನ್, ''ಕಾರ್ಲ್ ಮಾರ್ಕ್ಸ್ ಅವರ ಪ್ರತಿಮೆಯನ್ನು ನಿರ್ಮಿಸುತ್ತಿದ್ದಾರೆ. ಕಮ್ಯುನಿಸ್ಟರು ಸಹ ಅವರನ್ನು ಮರೆತಿದ್ದಾರೆ. ಕಾರ್ಲ್ ಮಾರ್ಕ್ಸ್ ಅವರಿಗೆ ತಮಿಳುನಾಡಿನೊಂದಿಗೆ ಯಾವ ಸಂಬಂಧವಿದೆ? ಅವರು ಎಂದಾದರೂ ಇಲ್ಲಿಗೆ ಬಂದಿದ್ದಾರೆಯೇ'' ಎಂದು ಪ್ರಶ್ನಿಸಿದ್ದಾರೆ. ಭಾರತೀಯ ನೆಲದಲ್ಲಿ ವಿದೇಶಿ ದಾರ್ಶನಿಕನಿಗಿಂತ ಸ್ಥಳೀಯ ಮಹನೀಯರಿಗೆ ಆದ್ಯತೆ ನೀಡಬೇಕು. ಕಮ್ಯುನಿಸಂ ಸಿದ್ಧಾಂತವು ಭಾರತದ ಸಾಂಸ್ಕೃತಿಕ ಬೇರುಗಳಿಗೆ ವಿರುದ್ಧ ಎಂಬುದು ಬಿಜೆಪಿ ಪ್ರತಿಪಾದನೆ. ಆದರೆ ಕೋಮು ಆಧಾರದಲ್ಲಿ ಜನರನ್ನು ವಿಭಜಿಸುವುದು ಸರಿಯೇ ಎಂಬ ಪ್ರಶ್ನೆ ನೆಟ್ಟಿಗರದ್ದು! ಅಷ್ಟಕ್ಕೂ ಸಂವಿಧಾನದ ಸಾಮಾಜಿಕ-ಆರ್ಥಿಕ ತತ್ವಗಳು ಮಾರ್ಕ್ಸ್‌ವಾದದ ಸಮಾನತೆ ಮತ್ತು ಶೋಷಣೆ ರಹಿತ ಸಮಾಜದ ವಿಚಾರಗಳಿಂದ ಪ್ರಭಾವಿತವಾಗಿರುವುದಲ್ಲವೇ?

ಇಪ್ಪತ್ತನೇ ಶತಮಾನದಲ್ಲಿ ಪ್ರಪಂಚದಾದ್ಯಂತ ಅನೇಕ ದೇಶಗಳಲ್ಲಿ ಕಾರ್ಲ್ ಮಾರ್ಕ್ಸ್ ಅವರ ಆಲೋಚನೆಗಳಿಂದ ಪ್ರೇರಿತವಾದ ಕ್ರಾಂತಿಗಳು ನಡೆದಿವೆ. ಈ ಕ್ರಾಂತಿಗಳು ಲಕ್ಷಾಂತರ ಜನರನ್ನು ದೌರ್ಜನ್ಯದಿಂದ ವಿಮೋಚನೆಗೊಳಿಸಿದೆ. ಮಾನವಕುಲದ ಪ್ರಗತಿಗೆ ಆರ್ಥಿಕ ಸಮಾನತೆ ಎಷ್ಟು ಅಗತ್ಯ ಎಂಬುದನ್ನು ವೈಜ್ಞಾನಿಕವಾಗಿ ತೋರಿಸಿದವರು ಕಾರ್ಲ್ ಮಾರ್ಕ್ಸ್.

ಇನ್ನು ಕಾರ್ಲ್ ಮಾರ್ಕ್ಸ್ ಮತ್ತು ತಮಿಳುನಾಡಿನ ನಡುವಿನ ಸಂಬಂಧವೇನು ಎಂಬ ತಮಿಳಿಸೈ ಅವರ ಪ್ರಶ್ನೆಯು ಟೀಕೆಗೆ ಗುರಿಯಾಗಿದೆ. ಮಾರ್ಕ್ಸ್ ಭಾರತದ ಬಗ್ಗೆ, ವಿಶೇಷವಾಗಿ ತಮಿಳುನಾಡಿನ ಬಗ್ಗೆ ಹಲವು ಬಾರಿ ಬರೆದಿದ್ದಾರೆ. 1853 ಮತ್ತು 1858ರ ನಡುವೆ, ಕಾರ್ಲ್ ಮಾರ್ಕ್ಸ್ ನ್ಯೂಯಾರ್ಕ್ ಡೈಲಿ ಟ್ರಿಬ್ಯೂನ್‌ನಲ್ಲಿ ಭಾರತದ ಬಗ್ಗೆ ಮೂವತ್ತಮೂರು ಲೇಖನಗಳನ್ನು ಬರೆದಿದ್ದಾರೆ. ಅವೆಲ್ಲವನ್ನೂ ಸಂಕಲಿಸಿ ''ಕಾರ್ಲ್ ಮಾರ್ಕ್ಸ್: ನೋಟ್ಸ್ ಆನ್ ಇಂಡಿಯನ್ ಹಿಸ್ಟರಿ'' ಎಂಬ ಪುಸ್ತಕವಾಗಿ ಪ್ರಕಟಿಸಲಾಗಿದೆ.

ಈ ಈ ಟಿಪ್ಪಣಿಗಳಲ್ಲಿ, ಮಾರ್ಕ್ಸ್ ಕ್ರಿ.ಶ. 664 ರಿಂದ 1858 ರವರೆಗಿನ ಭಾರತೀಯ ಇತಿಹಾಸದ ಬಗ್ಗೆ ಬರೆದಿದ್ದಾರೆ. ಇದರಲ್ಲಿ ಮೊಘಲ್ ಆಳ್ವಿಕೆ, ಬ್ರಿಟಿಷರು ಮತ್ತು ಫ್ರೆಂಚ್ ನಡುವಿನ



ಯುದ್ಧಗಳು ಮತ್ತು ಈಸ್ಟ್ ಇಂಡಿಯಾ ಕಂಪನಿ ನಡೆಸಿದ ಶೋಷಣೆಯ ಬಗ್ಗೆ ಉಲ್ಲೇಖವಿದೆ. ಈ ಬರಹಗಳು ಇಂದಿಗೂ ಭಾರತೀಯ ಇತಿಹಾಸವನ್ನು ಅರ್ಥಮಾಡಿಕೊಳ್ಳಲು ಉಪಯುಕ್ತವಾಗಿದೆ. ತಮಿಳುನಾಡಿನ ಬಗ್ಗೆ ಅವರ ಅವಲೋಕನಗಳೂ ಈ ಬರಹಗಳಲ್ಲಿದೆ.

ಸಿಪಾಯಿ ದಂಗೆಯ ಕುರಿತಾದ ಅವರ ಲೇಖನಗಳಲ್ಲಿ, (ರಾಷ್ಟ್ರೀಯ ಮತ್ತು ವಸಾಹತುಶಾಹಿ ಪ್ರಶ್ನೆಗಳ ಕುರಿತು ಮಾರ್ಕ್ಸ್ ಮತ್ತು ಎಂಗೆಲ್ಸ್ ಆಯ್ದ ಬರಹಗಳು, ಐಜಾಜ್ ಅಹ್ಮಂಡ್ ಸಂಪಾದಿಸಿದ್ದಾರೆ) ಮಾರ್ಕ್ಸ್ ಬ್ರಿಟಿಷ್ ಸರ್ಕಾರದ ಮದ್ರಾಸ್ ಚಿತ್ರಹಿಂಸೆ ಆಯೋಗ ( )ದ ಸಂಶೋಧನೆಗಳನ್ನು ಚರ್ಚಿಸಿದ್ದರು. ಬ್ರಿಟಿಷ್ ಕಂಪನಿಯು 1855ರಲ್ಲಿ ನೇಮಿಸಿದ ಈ ಸಮಿತಿಯು ಕಂದಾಯ ವಸೂಲಿ ವೇಳೆ ಭಾರತೀಯ ಅಧಿಕಾರಿಗಳು ನಡೆಸುತ್ತಿದ್ದ ಅಮಾನವೀಯ ಚಿತ್ರಹಿಂಸೆಗಳನ್ನು ಬಯಲಿಗೆಳೆದಿದೆ. ಕಾರ್ಲ್ ಮಾರ್ಕ್ಸ್ ವಿವರಿಸಿದ ಘಟನೆಗಳಲ್ಲಿ ಒಂದು ತಮಿಳುನಾಡಿನಲ್ಲಿ ನಡೆದಿರುವುದು. 1854ರಲ್ಲಿ ಅಧಿಕಾರಿಗಳು ಕಂದಾಯ ವಸೂಲಿ ವೇಳೆ ಚಿತ್ರಹಿಂಸೆ ನೀಡಿದ ಬಗ್ಗೆ ಮಾರ್ಕ್ಸ್ ಬರೆದಿದ್ದು, ಶೀಘ್ರದಲ್ಲೇ ಬ್ರಿಟಿಷ್ ಪತ್ರಿಕೆಗಳು ಅದನ್ನು ಪ್ರಕಟಿಸಿದ್ದವು. ಟೈಮ್ಸ್, ಪಂಚ್ ಈ ಬಗ್ಗೆ ವಿಡಂಬನಾತ್ಮಕ ಲೇಖನವನ್ನು ಪ್ರಕಟಿಸಿತು. ಈ ವೇಳೆ ಕೋರ್ಟ್ ತಕ್ಷಣವೇ ಮದ್ರಾಸ್ ಸರ್ಕಾರಕ್ಕೆ ವಿಚಾರಣೆ ನಡೆಸಿ ಪೂರ್ಣ ವರದಿ ನೀಡುವಂತೆ ನಿರ್ದೇಶಿಸಿತ್ತು. ಎಂದು ಕರೆಯಲ್ಪಡುವ ಈ ಸಂಸ್ಥೆಯು 1855ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು.

1857ರ ಸೆಪ್ಟೆಂಬರ್ 17ರಂದು ಕಾರ್ಲ್ ಮಾರ್ಕ್ಸ್ ನ್ಯೂಯಾರ್ಕ್ ಡೈಲಿ ಟ್ರಿಬ್ಯೂನ್‌ನಲ್ಲಿ ಬ್ರಿಟಿಷ್ ಆಳ್ವಿಕೆಯಲ್ಲಿ ಭಾರತೀಯರ ಮೇಲೆ ನಡೆಯುವ ಚಿತ್ರಹಿಂಸೆಯ ಬಗ್ಗೆ ಒಂದು ಲೇಖನವನ್ನು ಬರೆದಿದ್ದಾರೆ. ನ ವರದಿಯಲ್ಲಿದ್ದ ಹಲವು ವಿಚಾರಗಳನ್ನು ಉಲ್ಲೇಖಿಸಿದ್ದರು. ತಮಿಳುನಾಡಿನ ಕೊಲೆರೂನ್ (ಕೊಲ್ಲಿಡಮ್) ನದಿಯ ಮೇಲೆ ರೈಲ್ವೆ ಸೇತುವೆಯ ನಿರ್ಮಾಣದ ಬಗ್ಗೆಯೂ ಬರೆದವರು ಮಾರ್ಕ್ಸ್. ಕೊಲೆರೂನ್‌ನ ಬ್ರಾಹ್ಮಣನೊಬ್ಬ ಕೊಲೆರೂನ್ ಸೇತುವೆಯ ಕೆಲಸವನ್ನು ಮುಂದುವರಿಸಲು ತಹಶೀಲ್ದಾರ್ ಹಲಗೆಗಳು, ಇದ್ದಿಲು, ಉರುವಲು ಇತ್ಯಾದಿಗಳನ್ನು ಉಚಿತವಾಗಿ ಕೇಳಿದ್ದಾರೆ, ನಿರಾಕರಿಸಿದಾಗ ಬಂಧಿಸಿದ್ದಾರೆ ಎಂದು ದೂರಿದ್ದರು. ಭಾರತದಲ್ಲಿ ಚಿತ್ರಹಿಂಸೆ ಎಂಬುದು ಬ್ರಿಟಿಷ್ ಆಳ್ವಿಕೆಯ ದಿನನಿತ್ಯದ ಅಭ್ಯಾಸವಾಗಿತ್ತು ಎಂದು ಮಾರ್ಕ್ಸ್ ಬರೆದಿದ್ದಾರೆ.

ಮದ್ರಾಸ್‌ನಲ್ಲಿ ಬ್ರಿಟಿಷರು ಪರಿಚಯಿಸಿದ ರಿಯೋಟ್ವಾರಿ ವ್ಯವಸ್ಥೆ ಎಂಬ ಭೂಕಂದಾಯ ವ್ಯವಸ್ಥೆ ಬಗ್ಗೆಯೂ ಮಾರ್ಕ್ಸ್ ಬರೆದಿದ್ದಾರೆ. ಸರ್ಕಾರವು ಮಧ್ಯವರ್ತಿಗಳಿಲ್ಲದೆ ನೇರವಾಗಿ ರೈತರೊಂದಿಗೆ (ರೈಯೋಟ್) ಕಂದಾಯ ಒಪ್ಪಂದ ಮಾಡಿಕೊಳ್ಳುತ್ತಿತ್ತು. ಮಾರ್ಕ್ಸ್ ಇದನ್ನು ಕಾರ್ಮಿಕರ ಮೇಲಿನ ಶೋಷಣೆಯನ್ನು ಇನ್ನಷ್ಟು ತೀವ್ರಗೊಳಿಸುವ, ಆತ್ಮೀಯ ಒತ್ತಡವನ್ನು ಹೆಚ್ಚಿಸುವ ವ್ಯವಸ್ಥೆ ಎಂದು ವಿಮರ್ಶಿಸಿದ್ದಾರೆ. ಕಾರ್ಮಿಕರು ತಮ್ಮನ್ನು ತಾವೇ ಒತ್ತಡಕ್ಕೆ ನೂಕಿ ಹೆಚ್ಚು ಶ್ರಮಿಸುವಂತಾಗುತ್ತದೆ, ಆದರೆ ನಿಜವಾದ ಲಾಭ ಉಲ್ಲವರಿಗೆ ಸೇರುತ್ತದೆ ಎಂದು ಮಾರ್ಕ್ಸ್ ಹೇಳಿದ್ದರು.

ತಮಿಳುನಾಡಿನ ಕುರಿತಾದ ಕಾರ್ಲ್ ಮಾರ್ಕ್ಸ್ ಅವರ ಬರಹಗಳು ಇತಿಹಾಸ, ಅರ್ಥಶಾಸ್ತ್ರ, ಸಂಸ್ಕೃತಿ ಮತ್ತು ರಾಜಕೀಯವನ್ನು ವ್ಯಾಪಿಸಿವೆ. ವರು ತಮಿಳು ಭಾಷೆಯ ಪ್ರಾಚೀನತೆ ಮತ್ತು ತಮಿಳು ಸಾಮ್ರಾಜ್ಯಗಳ ಮಹತ್ವವನ್ನು ಒಪ್ಪಿಕೊಂಡವರು. ಆದ್ದರಿಂದ, ತಮಿಳುನಾಡಿನಲ್ಲಿ ಅವರ ಪ್ರತಿಮೆಯನ್ನು ಸ್ಥಾಪಿಸುವುದರಲ್ಲಿ ತಪ್ಪು ಕಾಣದು ಎಂಬುದು ತಮಿಳುನಾಡಿನ ಕಮ್ಯೂನಿಸ್ಟ್ ನಾಯಕರ ಮಾತು.

ಕಾಲಮಾನ ವಯಸ್ಕರಿಗೂ ಪ್ರಿಯವಾಗುವ ಮಕ್ಕಳ ಕಿರುಚಿತ್ರ ದಿ ರೆಡ್ ಬಲೂನ್

ಇಡೀ ಚಿತ್ರದಲ್ಲಿ ಕೆಂಪು ಬಲೂನ್ ಒಂದು ಪಾತ್ರವಾಗಿ ವೀಕ್ಷಕರನ್ನು ಮೋಡಿ ಮಾಡುತ್ತದೆ. ಸಿನಿಮಾ ತಂತ್ರಜ್ಞಾನ ಅಷ್ಟೇನೂ ಬೆಳೆದಿರದ 1950ರ ದಶಕದಲ್ಲಿ ಒಂದು ಬಲೂನಿನ ಚಲನವಲನವನ್ನು ಆಕರ್ಷಕವಾಗಿ, ಗಮನೀಯವಾಗಿ ಸೆರೆಹಿಡಿದಿರುವುದು ಅಚ್ಚರಿಯ ವಿಷಯ.

ಮಕ್ಕಳ ಚಲನಚಿತ್ರಗಳು ಮಕ್ಕಳಿಗಷ್ಟೇ ಸೀಮಿತವಾಗಿರುವವು ಇರುತ್ತವೆ. ಆದರೆ ವಯಸ್ಕರಿಗೂ ತಲುಪುವಂತಹ ಆಶಯಗಳುಳ್ಳ ಮಕ್ಕಳ ಚಲನಚಿತ್ರಗಳು ಬಂದಿವೆ. ಫೀಚರ್, ಸಾಕ್ಷ್ಯ ಮತ್ತು ಕಿರುಚಿತ್ರಗಳು ಈ ಜಾನ್ರ್ ()ನಡಿ ನಿರ್ಮಾಣಗೊಂಡಿವೆ.

ಅಂತಹ ಒಂದು ಮಕ್ಕಳ ಚಲನಚಿತ್ರ ದಿ ರೆಡ್ ಬಲೂನ್ (1956). ಇದರ ಕಾಲಾವಧಿ 34 ನಿಮಿಷಗಳು. ಆಲ್ಬರ್ಟ್ ಲಿಮೊರಿಸ್ ಇದರ ನಿರ್ದೇಶಕರು, ನಿರ್ಮಾಪಕರು ಹಾಗೂ ಕಥಾರಚನಕಾರರು.

ಆಲ್ಬರ್ಟ್ ಲಮೊರಿಸ್‌ಗೆ ಹಾರಾಡುವ ವಸ್ತುಗಳನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯುವ ಹವ್ಯಾಸವಿತ್ತು. ಈ ನಿಟ್ಟಿನಲ್ಲಿ ಅವರು ಹೆಲಿಕಾಪ್ಟರ್‌ನಲ್ಲಿ ಸ್ಟೆಡಿ ಕ್ಯಾಮೆರಾವನ್ನು ಅಳವಡಿಸಿ ಹೆಲಿವಿಷನ್ () ಎಂಬ ವ್ಯವಸ್ಥೆಯನ್ನು ಹುಟ್ಟುಹಾಕಿದರು! ಅಲ್ಲದೆ ಅವರು ರಾಜತಾಂತ್ರಿಕೆಗೆ ಸಂಬಂಧಿಸಿದ ಆಕ್ರಮಣ, ಸಂಘರ್ಷ ಮತ್ತು ಪರಿಹಾರಗಳ ರಿಸ್ಕ್ () ಎಂಬ ಸ್ಟ್ರಾಟಜಿ ಬೋರ್ಡ್ ಗೇಮನ್ನು 1957ರಲ್ಲಿ ರೂಪಿಸಿದರು. ಇದರಲ್ಲಿ ಎರಡರಿಂದ ಆರು ಆಟಗಾರರು ಇರುತ್ತಿದ್ದರು. ಇದು ಬೋರ್ಡ್ ಗೇಮ್ಸ್ ಗಳ ಚರಿತ್ರೆಯಲ್ಲೇ ಉನ್ನತ ಸ್ಥಾನವನ್ನು ಪಡೆದಿದೆ ಹಾಗೂ ಇತರ ಇಂತಹ ಆಟಗಳಿಗೆ ಸ್ಫೂರ್ತಿಯನ್ನು ನೀಡಿತು. ಇಂತಹ 1950-60 ದಶಕದ ಆಟಗಳು ಮುನ್ನೆಲೆಗೆ ಬಂದದ್ದು ಅಮರಿಕಾ ಮತ್ತು ಸೋವಿಯತ್ ಯೂನಿಯನ್ ನಡುವೆ ಜರುಗುತ್ತಿದ್ದ ಶೀತಲ ಸಮರ( )ದ ಸಮಯದಲ್ಲಿ ಎಂಬುದು ಗಮನೀಯ ಸಂಗತಿ.

ದಿ ರೆಡ್ ಬಲೂನ್ ನ ಪ್ರಾರಂಭದ ದೃಶ್ಯದಲ್ಲಿ ಪ್ಯಾಸ್ಕಲ್ ಎಂಬ ಸುಮಾರು ಆರು ವರ್ಷದ ಹುಡುಗ (ಈ ಪಾತ್ರವನ್ನು ನಿರ್ದೇಶಕನ ಮಗನೇ ಮಾಡಿದ್ದಾನೆ) ಪ್ಯಾರಿಸ್‌ನ ಒಂದು ದುಡಿಯುವ ವರ್ಗದ ಪ್ರದೇಶದಲ್ಲಿ ಶಾಲೆಯನ್ನು ತಲುಪಲು ನಡೆದುಕೊಂಡು ಹೋಗುತ್ತಿರುತ್ತಾನೆ. ಕ್ಯಾಮೆರಾ ಆ ಪ್ರದೇಶದ ತುಂಬ ಸಾಮಾನ್ಯವೆನಿಸುವ ಕಟ್ಟಡಗಳು ಮತ್ತು ಮಾರ್ಗವನ್ನು ಸೆರೆಹಿಡಿಯುತ್ತದೆ.

ಮಾರ್ಗ ಮಧ್ಯದಲ್ಲಿ ಪ್ಯಾಸ್ಕಲ್ ಒಂದು ಕಟ್ಟಡದ ರೈಲಿಂಗ್‌ನಲ್ಲಿ ಹೀಲಿಯಂ ಗ್ಯಾಸ್‌ನಿಂದ ತುಂಬಿದ ಕೆಂಪು ಬಲೂನನ್ನು ಕಾಣುತ್ತಾನೆ. ಯಾವ ಮಗು ಬಲೂನ್‌ಗೆ ಮಾರುಹೋಗುವುದಿಲ್ಲ? ಪ್ಯಾಸ್ಕಲ್ ಕೂಡ ಅದನ್ನು ಹೊಂದಬೇಕೆಂಬ ತವಕದಿಂದ ರೈಲಿಂಗನ್ನು ಹತ್ತಿ ಅದನ್ನು ತನ್ನದಾಗಿಸಿಕೊಳ್ಳುತ್ತಾನೆ! ಅವನು ನಿತ್ಯ ಪಯಣಿಸುವ ಬಸ್‌ನ ಕಂಡಕ್ಟರ್ ಬಲೂನನ್ನು ಹೊಂದಿರುವುದಕ್ಕಾಗಿ ಪ್ರವೇಶವನ್ನು ನಿರಾಕರಿಸುತ್ತಾನೆ. ಹೀಗಾಗಿ ಪ್ಯಾಸ್ಕಲ್ ಓಡಿಕೊಂಡೇ ತನ್ನ ಶಾಲೆಯನ್ನು ತಲುಪುತ್ತಾನೆ.

ಶಾಲೆಯಿಂದ ವಾಪಸ್ಸು ಬರುವಾಗ, ಅವನು ಮಳೆಯಿಂದ ತನ್ನ ಬಲೂನನ್ನು ರಕ್ಷಿಸಲು ದಾರಿಹೋಕರ ಕೊಡೆಗಳಲ್ಲಿ ತೂರಿಕೊಂಡು, ಮನೆಯನ್ನು ತಲುಪುತ್ತಾನೆ. ಅವನ ಅಜ್ಜಿ ಬಲೂನನ್ನು ಬಾಲ್ಕನಿಯಿಂದ ಎಸೆಯುತ್ತಾಳೆ. ಆದರೆ ಆ ಬಲೂನು ಅಲ್ಲೇ ಓಲಾಡುತ್ತಿರುತ್ತದೆ. ಪ್ಯಾಸ್ಕಲ್ ಅದನ್ನು ಪುನಃ ತನ್ನ ವಶಕ್ಕೆ ಪಡೆಯುತ್ತಾನೆ.

ಹೀಗೆ ಪ್ಯಾಸ್ಕಲ್ ಮತ್ತು ಬಲೂನ್ ನಡುವೆ ಸ್ನೇಹ ಶುರುವಾಗುತ್ತದೆ! ಅದು ಅವನ ಜೊತೆ ಕಣ್ಣು ಮುಚ್ಚಾಲೆ ಆಟವಾಡುತ್ತದೆ, ಅಣತಿಯನ್ನು ಪಾಲಿಸುತ್ತದೆ ಮತ್ತು ಬಸ್‌ನಲ್ಲಿ ಪಯಣಿಸುವಾಗ ಅವನ ಹಿಂದೆಯೇ ಬರುತ್ತದೆ! ಒಮ್ಮೆ ಅವನು ನಡೆದು ಬರುತ್ತಿರುವಾಗ, ಒಂದು ಹುಡುಗಿಯ ಕೈನಲ್ಲಿದ್ದ ನೀಲಿ ಬಲೂನಿನತ್ತ ಕೆಂಪು ಬಲೂನ್ ಸೆಳೆಯಲ್ಪಡುತ್ತದೆ! ಈ ಹುಡುಗಿಯ ಪಾತ್ರವನ್ನು ನಿರ್ದೇಶಕರ ಮಗಳೇ ಮಾಡಿದ್ದಾಳೆ.

ನಂತರ ಕೆಲವು ಪುಂಡ ಮಕ್ಕಳು ಆ ಕೆಂಪು ಬಲೂನನ್ನು ಹೊಂದಲು ಹರಸಾಹಸ ಪಡುತ್ತಾರೆ. ಈ ಘಟ್ಟದಲ್ಲಿ ಓಡುತ್ತಿರುವ ಪ್ಯಾಸ್ಕಲ್‌ನನ್ನು ಹಿಂಬಾಲಿಸುವ ಹುಡುಗರ ಸುಮಾರು ಮೂರು ನಿಮಿಷಗಳ ಲಾಂಗ್ ಟೇಕಿದೆ.

ಕೊನೆಯಲ್ಲಿ ಆ ಕೆಂಪು ಬಲೂನಿನ ಮೇಲೆ ಹುಡುಗನೊಬ್ಬ ಎಸೆದ ಕವಣೆ ಕಲ್ಲು ತನ್ನ ಗುರಿಯನ್ನು ತಲುಪಿ ಅದು ನೆಲಕಚ್ಚುತ್ತದೆ. ಆಗ ಒಂದು ಬೂಟ್ ಬಲೂನನ್ನು ಹೊಸಕಿಹಾಕುವುದನ್ನು ವೀಕ್ಷಕರು ನೋಡುತ್ತಾರೆ. ಇದು ಸುಮಾರು ಒಂದೂವರೆ ನಿಮಿಷಗಳ ಅವಧಿಯ ಟೇಕ್‌ನಲ್ಲಿ(ಕ್ಲೋಸ್ ಅಪ್ ಸಹಿತ) ಸೆರೆಹಿಡಿಯಲಾಗಿದೆ.

ಇಡೀ ಚಿತ್ರದಲ್ಲಿ ಕೆಂಪು ಬಲೂನ್ ಒಂದು ಪಾತ್ರವಾಗಿ ವೀಕ್ಷಕರ ಮೇಲೆ ಮೋಡಿ ಹಾಕುತ್ತದೆ. ಸಿನಿಮಾ ತಂತ್ರಜ್ಞಾನ ಅಷ್ಟೇನೂ ಬೆಳೆದಿರದ 1950ರ ದಶಕದಲ್ಲಿ ಒಂದು ಬಲೂನಿನ ಚಲನವಲನವನ್ನು ಆಕರ್ಷಕವಾಗಿ, ಗಮನೀಯವಾಗಿ ಸೆರೆಹಿಡಿದಿರುವುದು ಅಚ್ಚರಿಯ ವಿಷಯ.

2) ಕೆಂಪು ಬಲೂನ್ ಸಂತಸ ಹಾಗೂ ಸ್ನೇಹವನ್ನು ಸೂಚಿಸುತ್ತದೆ.

3) ಈ ಕಿರುಚಿತ್ರವನ್ನು ಮಕ್ಕಳು ಮತ್ತು ವಯಸ್ಕರು ಹೇಗೆ ದೃಷ್ಟಿಸುತ್ತಾರೆ ಎಂಬುದು ಕುತೂಹಲಕಾರಿ ಪ್ರಶ್ನೆಯೇ ಸರಿ. ವಯಸ್ಕ ವೀಕ್ಷಕರು ಕೆಂಪು ಬಲೂನಿನ ಪಾತ್ರ ಕಟ್ಟೋಣಕ್ಕೆ ಸಂಬಂಧಿಸಿದಂತೆ ಅನೇಕ ಅರ್ಥಗಳನ್ನು ನೀಡಬಹುದು. ಮಕ್ಕಳು ತಮ್ಮ ಬಾಲ್ಯ ಸಹಜ ಮನೋಭಾವದಿಂದ ಗ್ರಹಿಸಬಹುದು.

4) ಈ ಕಿರುಚಿತ್ರದಲ್ಲಿ ಕೆಂಪು ಬಲೂನಿಗೆ ಸಂಬಂಧಿಸಿದಂತೆ ವಯಸ್ಕರು ನಡೆದುಕೊಳ್ಳುವ ಬಗೆಗೆ ಒಂದರ್ಥದಲ್ಲಿ ಅವರ ಸಂಕುಚಿತ ದೃಷ್ಟಿಕೋನವನ್ನು ಅನಾವರಣಗೊಳಿಸುತ್ತದೆ.

5) ಮಕ್ಕಳು, ಪುಂಡರು ತಮ್ಮ ವಯೋಸಹಜ ನಡವಳಿಕೆಯಿಂದ ಬಲೂನನ್ನು ಹೊಂದಲು ಆತುರದಿಂದ ಇರುತ್ತಾರೆ. ಒಂದಿಷ್ಟು ಪುಂಡಾಟಿಕೆ ನಡೆಸಿದರೂ ಅದು ದೊಡ್ಡ ಪ್ರಮಾದ ಎಂದೆನಿಸುವುದಿಲ್ಲ.

6) ಈ ಕಿರುಚಿತ್ರದ ಅಂತಿಮ ದೃಶ್ಯ ವೀಕ್ಷಕರಲ್ಲಿ ಒಂದು ಬೆಚ್ಚನೆಯ ಭರವಸೆಯ ಭಾವವನ್ನು ಮೂಡಿಸುವುದರಲ್ಲಿ ಸಫಲವಾಗುತ್ತದೆ. ಇದು ಚಿತ್ರದ ಆಪ್ತವೆನಿಸುವ ಭಾಗದ ಜೊತೆಗೆ ಕಲ್ಪನೆ ಮತ್ತು ಫ್ಯಾಂಟಸಿಯ ಮೂಲಕ ಸತ್ಯವನ್ನು ಕೂಡ ಸೃಷ್ಟಿಸುತ್ತದೆ. ಇಡೀ ಕಿರುಚಿತ್ರದಲ್ಲಿ ಪ್ಯಾರಿಸ್‌ನ ನಿತ್ಯದ ವಾಸ್ತವಿಕತೆಯ ಜೊತೆ ಮಕ್ಕಳ ಕಲ್ಪನೆಗಳು ಕಾವ್ಯಾತ್ಮಕವಾಸ್ತವವಾದ( )ದ ರೂಪವನ್ನು ಪಡೆಯುತ್ತವೆ.

ಹೀಗೆ ಒಂದು ಸರಳ ಮಕ್ಕಳ ಕಿರುಚಿತ್ರ ಎಲ್ಲ ವಯಸ್ಸಿನ ವೀಕ್ಷಕರಲ್ಲಿ ಅನೇಕ ತೆರನಾದ ವ್ಯಾಖ್ಯಾನಗಳನ್ನು ಸೃಷ್ಟಿಸುವ ಶಕ್ತಿಯನ್ನು ಹೊಂದಿದೆ. ಇದು 1956ರ ಕಾನ್ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರಶಸ್ತಿಯನ್ನು ಪಡೆದುಕೊಂಡಿತು. ಆ ವರ್ಷ ಫ್ರಾನ್ಸಿನ ಹೆಸರುವಾಸಿ ನಿರ್ದೇಶಕ ಫೆಡ್ರಿಕೊ ಫೆಲಿನಿಯ ಲಾಸ್ಟ್ರಾಡಾ ( ) ಫಿಲ್ಮನ್ನು ಹಿಂದಿಕ್ಕಿ ಪ್ರಶಸ್ತಿಯನ್ನು ಪಡೆದದ್ದು ಈ



Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR